**ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):** ಮಾನ್ಯ ಅಧ್ಯಕ್ಷರೆ, 110 ಹಳ್ಳಿಗಳಿಗೆ ಜಲಮಂಡಳಿಯಿಂದ ಕುಡಿಯುವ ನೀರು ಕೊಡುವುದಕ್ಕೆ ಅವಕಾಶ ಇರುವುದಿಲ್ಲ. ಅದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ 2379 ಕೋಟಿ ರೂ.ಪಾಯಿಗಳ ಮೊತ್ತದ ಯೋಜನೆಯನ್ನು ತಯಾರು ಮಾಡಿ ಈ ಹಳ್ಳಿಗಳಿಗೆಲ್ಲಾ ಕುಡಿಯುವ ನೀರು ಕೊಡಲಿಕ್ಕೆ ಒಂದು ಯೋಜನೆಯನ್ನು ಕೇಂದ್ರ ಸರ್ಕರಕ್ಕೆ ಕೊಟ್ಟಿದ್ದಾರೆ. ಅದು ಬಂದಮೇಲೆ ಅದಕ್ಕೆಲ್ಲ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ.

**ಅಧ್ಯಕ್ಷರು:** O. K.

**9. ವಿಷಯ: ಕಾವೇರಿ ನ್ಯಾಯಮಂಡಳಿ ಐತೀರ್ಪಿನ ವಿರುದ್ಧ ಕಾವೇರಿ ನದಿ ನೀರಿನ ರಕ್ಷಣೆಯ ಬಗ್ಗೆ ಪ್ರತಿಭಟನೆ ಮಾಡಿದವರ ಮೇಲೆ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ.**

**ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ):** ಮಾನ್ಯ ಅಧ್ಯಕ್ಷರೆ, ಕಾವೇರಿ ನ್ಯಾಯ ಮಂಡಳಿ ಐತೀರ್ಪಿನ ವಿರುದ್ಧ ಕಾವೇರಿ ನದಿ ನೀರಿನ ರಕ್ಷಣೆಯ ಬಗ್ಗೆ ಪ್ರತಿಭಟನೆ ಮಾಡಿದವರ ಮೇಲೆ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ.

**ಶ್ರೀ ಕೆ. ಜೆ. ಜಾರ್ಜ (ಮಾನ್ಯ ಗೃಹ ಸಚಿವರು):** ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ರಕ್ಷಣೆ ವಿಚಾರದಲ್ಲಿ ನ್ಯಾಯಮಂಡಳಿ ಐತೀರ್ಪಿನ ವಿರುದ್ಧ ಮತ್ತು ಕೇಂದ್ರ ಸರ್ಕಾರದ ವಿರುದ್ಧ ನಡೆದ ಘಟನೆಗಳಲ್ಲಿ 2012ರ ಇಸವಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ 45 ಪ್ರಕರಣಗಳು ದಾಖಲಾಗಿರುತ್ತವೆ. ವಿವರ ಕೆಳಗಿನಂತಿದೆ:

| ವರದಿಯಾದ ಒಟ್ಟು ಪ್ರಕರಣಗಳು | ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳು | ವಜಾ / ಬಿಡುಗಡೆ / ಖುಲಾಸೆಗೊಂಡ ಪ್ರಕರಣಗಳು | ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ | ನ್ಯಾಯಾಲಯದಿಂದ ಸಿ.ಸಿ. ಸಂಖ್ಯೆ ಬರಬೇಕಾಗಿದೆ |
|---|---|---|---|---|
| 45 | 40 | 0 | 04 | 01 |

ಈ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಸದರಿ 41 ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ 41 ಮೊಕದ್ದಮೆಗಳ ವಿವರಗಳನ್ನು ಅನುಬಂಧ-ಅ ದಲ್ಲಿ ನೀಡಲಾಗಿದೆ.

ರೈತರು ಶಾಂತಿಯುತವಾಗಿ ಪ್ರತಿಭಟನೆ / ಚಳುವಳಿಯನ್ನು ಮಾಡದೇ ಸಾರ್ವಜನಿಕ ರಸ್ತೆಯ ಮೇಲೆ ಚಳುವಳಿಯನ್ನು ಹಮ್ಮಿಕೊಂಡು, ಸಾರ್ವಜನಿಕರಿಗೆ ಹಾಗೂ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದು ಪೋಲೀಸರ ಕರ್ತವ್ಯಕ್ಕೆ ಅಡಚಣೆ ಉಂಟು ಮಾಡಿದ್ದರಿಂದ ಪ್ರಕರಣಗಳನ್ನು ದಾಖಲಿಸಲಾಗಿದೆ. ಇಂತಹ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದರಿಂದ ಇಂತಹ ಘಟನೆಗಳು ಪದೇ-ಪದೇ ಮರುಕಳಿಸಿ ಸಾರ್ವಜನಿಕ ನೆಮ್ಮದಿಗೆ ಧಕ್ಕೆ ಉಂಟಾಗಿ ಸಾರ್ವಜನಿಕರು ನ್ಯಾಯಾಂಗದ ಮೇಲೆ ಇಟ್ಟಿರುವ ನಂಬಿಕೆಗೆ ಚ್ಯುತಿ ಉಂಟಾಗಿ ಸಮಾಜದಲ್ಲಿ ಅಶಾಂತಿ ಉಂಟಾಗಿ ಆರೋಪಿಗಳು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವ ರೀತಿಯಲ್ಲಿ ಕೃತ್ಯವನ್ನು ಎಸಗುವ ಸಂಭವ ಇರುತ್ತದೆ. ಸದರಿ ಆರೋಪಿಗಳಿಗೆ ನಮ್ಮ ಈಡೇರಿಕೆಗಳನ್ನು ಪೂರೈಸಿಕೊಳ್ಳಲು ಶಾಂತಿಯುತವಾಗಿ ಚಳುವಳಿಯನ್ನು ಮಾಡದೇ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡಚಣೆ ಉಂಟಾಗುವ ರೀತಿಯಲ್ಲಿ ಕೃತ್ಯವನ್ನೆಸಗಿರುತ್ತಾರೆ. ಈ ಪ್ರಕರಣಗಳನ್ನು ಹಿಂತೆಗೆದುಕೊಂಡಲ್ಲಿ ಕಾನೂನಿನ ಬಗ್ಗೆ ಮತ್ತು ಪೊಲೀಸರ ಬಗ್ಗೆ ಯಾವುದೇ ಭಯವಿಲ್ಲದೆ ಪದೇ ಪದೇ ರಸ್ತೆ ತಡೆ ಮಾಡುವ ಹವ್ಯಾಸ ಬೆಳೆಸಿಕೊಂಡು ಆರೋಪಿಗಳಿಗೆ ಪರೋಕ್ಷವಾಗಿ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ಕಾನೂನು ಸುವ್ಯವಸ್ಥೆಗೆ ತೊಡಕು ಮತ್ತು ಧಕ್ಕೆ ಉಂಟಾಗಿ ಕಾನೂನು ಸುವ್ಯವಸ್ಥೆ ಪಾಲನೆ ಮಾಡಲು ಕ್ಲಿಷ್ಟಕರವಾಗುತ್ತದೆ ಎಂದು ಪೊಲೀಸ್ ಇಲಾಖೆಯು ಅಭಿಪ್ರಾಯ ಪಟ್ಟಿರುತ್ತದೆ.

ಮೇಲಿನ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಅಧಿಸೂಚನೆ ಮತ್ತು ಕಾನೂನು ಇಲಾಖೆಯ ಅಭಿಪ್ರಾಯಗಳನ್ನು ಪಡೆದು ಸರ್ಕಾರದ ಸಚಿವ ಸಂಪುಟ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ.

# ಅನುಬಂಧ–ಅ

## ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳು

| ಕ್ರ. ಸಂ. | ಪೊಲೀಸ್ ಠಾಣೆಯ ಹೆಸರು | ಮೊ. ಸಂ. ಮತ್ತು ಕಲಂ | ಪಿರ್ಯಾದಿಯ ಹೆಸರು ಮತ್ತು ವಿಳಾಸ | ಆರೋಪಿಗಳ ಹೆಸರು ಮತ್ತು ವಿಳಾಸ | ಪ್ರಕರಣದ ಸಂಕ್ಷಿಪ್ತ ಸಾರಾಂಶ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|
| 1 | ಪೂರ್ವ | 200/12 ಕಲಂ 143– 341– 332 ಕೂಡ 149 ಐಪಿಸಿ | ಶ್ರೀ ಎಂ. ಮಂಜುನಾಥ್ ಪಿಎಸ್ಐ ಪೂರ್ವ ಪೊಲೀಸ್ ಠಾಣೆ ಮಂಡ್ಯ | 1) ಹೆಚ್. ಡಿ. ಜಯರಾಂ @ ಕಬ್ಬನಹಳ್ಳಿ ಜಯರಾಮು ಬಿನ್ ಡಿ. ಎಂ. ದೇವಯ್ಯ, 62ವರ್ಷ, ಕರ್ನಾಟಕ ರಕ್ಷಣ ವೇದಿಕೆ, ಪ್ರವೀಣ್ ಶೆಟ್ಟಿ ಬಣ, ವಾಸ ಬೂತನಹೊಸೂರು, ಮಂಡ್ಯ ತಾ.<br>2) ಮಹೇಶ ಬಿನ್ ಮಾದೇಗೌಡ 28 ವರ್ಷ, ಒಕ್ಕಲಿಗರು, ಕ.ರ.ವೇ ಮುಖಂಡ (ಪ್ರವೀಣಶೆಟ್ಟಿ ಬಣ) ವಾಸ ಚೇರನಹಳ್ಳಿ, ಮಂಡ್ಯ ತಾ.<br>3) ವೆಂಕಟೇಶ್ ಬಿನ್ ಗಾರೆಜಯರಾಮಯ್ಯ, 32 | ದಿನಾಂಕ: 06.08.2012 ರಂದು ಮಧ್ಯಾಹ್ನ 3–20 ಗಂಟೆ ಸಮಯದಲ್ಲಿ ನಾನು ಮತ್ತು ಲೋಕೇಶ್ ಪ್ರೋಬೇಷನರಿ ಪಿ.ಎಸ್.ಐ. ರವರು ದಲಿತ ಸಂಘರ್ಷ ಸಮಿತಿ ಸಂಘಟನೆ ಯವರ ಪ್ರತಿಭಟನಾ ಬಂದೋಬಸ್ತ್ ಮುಗಿಸಿಕೊಂಡು ಮಹಾವೀರ ಸರ್ಕಲ್ ಮುಖಾಂತರ ಠಾಣೆಯ ಕಡೆಗೆ ಇಲಾಖೆ ಜೀಪ್ ನಂ. ಕೆ.ಎ.–11 ಜಿ–138 ರಲ್ಲಿ ಬರುತ್ತಿದ್ದಾಗ ನಂದ ಸರ್ಕಲ್ ಬಳಿ ಕರ್ತವ್ಯ | ಸಿ. ಸಿ. ನಂ. 948/13 ರಲ್ಲಿ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | |
|---|---|---|---|---|---|---|
| | | | | ವರ್ಷ, ಒಕ್ಕಲಿಗರು, ಮಂಡ್ಯ ಸುವರ್ಣ ರಕ್ಷಣ ವೇದಿಕೆಯ ಜಿಲ್ಲಾಧ್ಯಕರು, ಮುಟ್ಟನಹಳ್ಳಿ, ಸಿ.ಎ.ಕೆರೆ, ಹೊಬಳಿ, ಮದ್ದೂರು ತಾ. ಮಂಡ್ಯ ಜಿಲ್ಲೆ.<br>4) ನಾಗರಾಜು @ ಸ್ಪಾಟ್‌ನಾಗ, ಬಿನ್ ನಿಂಗಣ್ಣ @ ನಿಂಗಯ್ಯ, ಒಕ್ಕಲಿಗರು, ವ್ಯವಸಾಯ, ಗೊರವಾಲೆ, ಹೈಸ್ಕೂಲ್‌ಪಕ್ಕ ಮಂಡ್ಯ ತಾ.<br>5) ಲಿಂಗರಾಜು ಬಿನ್ ರಾಮಪ್ಪ, 40 ವರ್ಷ, ಒಕ್ಕಲಿಗರು, ವ್ಯವಸಾಯ ಕೆಲಸ, ವಾಸ ತಂಡಸನಹಳ್ಳಿ, ಮಂಡ್ಯ ತಾ.<br>6) ಮೋಹನ್ ಕುಮಾರ್ ಬಿನ್ ದಾಸೇಗೌಡ, 32 ವರ್ಷ, ಮಂಡ್ಯ ಸುವರ್ಣ ರಕ್ಷಣ ವೇದಿಕೆಯ, ಮಂಡ್ಯ ತಾಲ್ಲೂಕ್ ಅಧ್ಯಕ್ಷರು, ವಾಸ ಸಾತನೂರು ಗ್ರಾಮ, ಮಂಡ್ಯ | ನಿರ್ವಹಿಸುತ್ತಿದ್ದ ಸಂಚಾರಿ ಕರ್ತವ್ಯದ ಸಿಬ್ಬಂದಿಯಾದ ಮಹೇಂದ್ರ ಸಿಪಿಸಿ 829 ರವರು ನಿಯಂತ್ರಣ ಕಚೇರಿಗೆ ನಿಸ್ತಂತು ಮೂಲಕ ನಂದಾ ಸರ್ಕಲ್‌ನ ರಸ್ತೆಯ ಮಧ್ಯ ಭಾಗದಲ್ಲಿ ಸುಮಾರು 50-60 ಜನ ರೈತರು ಸೇರಿಕೊಂಡು ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆಯು ಸ್ಥಗಿತಗೊಂಡಿದೆ ಎಂದು ಬೆಂಗಳೂರು-ಮೈಸೂರು ಮತ್ತು ಮೈಸೂರು-ಬೆಂಗಳೂರು ಕಡೆಗೆ ಹೋಗುವ ವಾಹನಗಳನ್ನು ಹೋಗದಂತೆ ತಡೆದು ಸಂಚಾರಕ್ಕೆ ಅಡ್ಡಿಪಡಿಸಿ ಪ್ರತಿಭಟಿಸುತ್ತಿರುವುದಾಗಿ ಮತ್ತು ಮಂಡ್ಯ ಪೂರ್ವ ಪೊಲೀಸ್ ಠಾಣೆಗೆ ಮಾಹಿತಿ ತಿಳಿಸುವಂತೆ | |

| | | | | | | |
|---|---|---|---|---|---|---|
| | | | | ತಾ.<br>7) ವಿಜಯಸಿಂಹ, 40 ವರ್ಷ, ಬ್ರಾಹ್ಮಣಜನಾಂಗ, ಚೈತನ್ಯ ಅಯ್ಯಂಗಾರ್ ಬೇಕರಿ ಮಾಲಿಕರು, ವಾಸ ವಿದ್ಯಾನಗರ, ಮಂಡ್ಯ.<br>8) ರಫೀವುಲ್ಲಾ @ ರಫೀ ಬಿನ್ ಬಿ.ಎಸ್.ಬಾಷಾ, 38 ವರ್ಷ, ಸರ್ವಿಸ್ ಸೆಂಟರ್‌ನಲ್ಲಿ ಕೆಲಸ, ಟಿಪ್ಪು ರಸ್ತೆ, ಸಬ್ಬರಿಯಾಬಾದ್ ಮೊಹಲ್ಲಾ, ಮಂಡ್ಯ ಸಿಟಿ.<br>9) ರಮೇಶ @ ಶಾಮಿಯಾನ ರಮೇಶ್ ಬಿನ್ ಲೇ.ಸುಬ್ಬಯ್ಯ, 48 ವರ್ಷ, ಬೆಸ್ತರು, ಚಂದ್ರಶ್ರೀ ಶಾಮಿಯಾನ ಮಾಲೀಕರು, 7ನೇ ಕ್ರಾಸ್ ಲೇಬರ್ ಕಾಲೋನಿ, ಮಂಡ್ಯ ಸಿಟಿ.<br>10) ವಿನೋದ ಬಿನ್ ಶಿವನಂಜು, 18 ವರ್ಷ, ಒಕ್ಕಲಿಗರು, ವಿದ್ಯಾರ್ಥಿ, ವಾಸ 6ನೇ ಕ್ರಾಸ್ ಲೈಬರ್ | ತಿಳಿಸಿದ ಮೇರೆಗೆ ಠಾಣೆಯ ಕಡೆಗೆ ಬರುತ್ತಿದ್ದ ನಾವು ಕೂಡಲೇ ನಂದ ಸರ್ಕಲ್‌ಗೆ ಹೋಗಿ ಅಲ್ಲಿ ಸೇರಿದ್ದ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಸಂಘಟನೆಯ ಅಧ್ಯಕ್ಷರಾದ ಜಯರಾಮ ರವರ ನೇತೃತ್ವದಲ್ಲಿ ಸೇರಿದ್ದ ರೈತರನ್ನು ನೀವು ಮಾಡುತ್ತಿರುವುದು ಸರಿಯಲ್ಲ, ನೀವು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದೀರಿ ಎಂದು ಎಷ್ಟೇ ಹೇಳಿದರೂ ಸಹ ಕೇಳದೆ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ವಾಹನಗಳನ್ನು ತಡೆದು ಸಾರ್ವಜನಿಕರ ವಾಹನಗಳಿಗೆ ತೊಂದರೆ ಕೊಡುತ್ತಿದ್ದ ಪ್ರತಿಭಟನಾಕಾರರಿಗೆ ಚದರುವಂತೆ ತಿಳುವಳಿಕೆ | |

| | | | | | | |
|---|---|---|---|---|---|---|
| | | | | ಕಾಲೋನಿ, ಮಂಡ್ಯ ಸಿಟಿ.<br>11) ಶ್ರೀಧರ ಬಿನ್ ಸಿದ್ದಲಿಂಗಯ್ಯ, 18ವರ್ಷ, ವಕ್ಕಲಿಗರು, ವಿದ್ಯಾರ್ಥಿ, ವಾಸ 6ನೇ ಕ್ರಾಸ್ ಲೇಬರ್ ಕಾಲೋನಿ, ಮಂಡ್ಯ ಸಿಟಿ.<br>12) ಮನು ಬಿನ್ ಶವರಾಜು, 18 ವರ್ಷ, ಈಡಿಗ ಜನಾಂಗ, ವಿದ್ಯಾರ್ಥಿ, ವಾಸ 7ನೇ ಕ್ರಾಸ್ ಲೇಬರ್‌ಕಾಲೋನಿ, ಮಂಡ್ಯ ಸಿಟಿ.<br>13) ಮಧು ಬಿನ್ ಮರಿಸ್ವಾಮಿ, 28ವರ್ಷ, ಮಡಿವಾಳ್ ಶೆಟ್ಟರು, ಟೋ ಚಾಲಕ, ವಾಸ 6ನೇ ಕ್ರಾಸ್ ಲೇಬರ್ ಕಾಲೋನಿ, ಮಂಡ್ಯ<br>14) ಆದಿ @ ಅವಿನಾಶ್ ಬಿನ್ ಕೆಂಪೇಗೌಡ, 21 ವರ್ಷ, ಒಕ್ಕಲಿಗರು, ಕೊಡಿಯಾಲ ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾ, ಹಾಲಿ ಡಿ. ಹಳ್ಳಿ ತಮ್ಮಣ್ಣರವರ ಮನೆ, | ನೀಡಿದರು ಕೇಳದೇ ನಂದ ಸರ್ಕಲ್‌ನ ರಸ್ತೆ ಮಧ್ಯದಲ್ಲಿ ಪ್ರತಿಭಟನೆಯನ್ನು ಮುಂದುವರೆಸಿ ಹಿಂಸಾಚಾರಕ್ಕೆ ಪ್ರಯತ್ನಪಟ್ಟಾಗ ಸ್ಥಳಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ಬರಮಾಡಿಕೊಂಡು ಕನಿಷ್ಠ ಬಲ ಪ್ರಯೋಗ ಮಾಡಿ ರಸ್ತೆಯನ್ನು ಸಂಜೆ 04-05 ಗಂಟೆಗೆ ಪ್ರತಿಭಟನಾಕಾರರಿಂದ ತೆರವು ಗೊಳಿಸಿ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಈ ಸಮಯದಲ್ಲಿ ಕರ್ತವ್ಯದಲ್ಲಿದ್ದ ಠಾಣಾ ಸಿಬ್ಬಂದಿ ಶಂಕರ್ ಸಿಪಿಸಿ 226 ಮತ್ತು ಮುನಿರಾಜು ಸಿಪಿಸಿ 348 ರವರನ್ನು ಪ್ರತಿಭಟನಾಕಾರರು ತಳ್ಳಾಡಿ, ನೂಕಾಡಿ | |

| | | | | | | |
|---|---|---|---|---|---|---|
| | | | | ರೇವಣ್ಣ ಬಿನ್ ಲೇ. ಲಿಂಗೇಗೌಡ, 5ನೇ ಕ್ರಾಸ್ ಲೇಬರ್ ಕಾಲೋನಿ ಮಂಡ್ಯ<br>15) ರಾಹುಲ್ ಬಿನ್ ಕಾಳಯ್ಯ, 22ವರ್ಷ, ಮಡಿವಾಳ್ ಶೆಟ್ಟರು, ಆಟೋ ಚಾಲಕ, ವಾಸ 4ನೇ ಕ್ರಾಸ್ ಲೇಬರ್ ಕಾಲೋನಿ, ಮಂಡ್ಯ<br>16) ಮಹದೇವಸ್ವಾಮಿ ಕೆ. ಎಂ. ಬಿನ್ ಮಾದೇಗೌಡ, 34 ವರ್ಷ, ಹಾಲುಮತ, ವ್ಯಾಪಾರ ಕೆಲಸ, 7ನೇ ಕ್ರಾಸ್, ಭೋವಿ ಕಾಲೋನಿ ಮಂಡ್ಯ ಸಿಟಿ. ಹಾಲಿ ವಾಸ ಯತ್ತಗದ ಹಳ್ಳಿ ಬೋರೆ, ಮಂಡ್ಯಸಿಟಿ<br>17) ಶೇಖರ್ @ ಹುಳ್ಳಿಮಳೆ ಬಿನ್ ಲೇ. ರಾಮಣ್ಣ ದಿ ಕಡ್ಡಿಪುಡಿ, 30 ವರ್ಷ<br>18) ಕೆ. ಟಿ. ಶಂಕರೇಗೌಡ ಬಿನ್ ತಮ್ಮಯ್ಯ, 49 ವರ್ಷ, ಜಯ ಕರ್ನಾಟಕ ಸಂಘದ ಜಿಲ್ಲಾಧ್ಯಕ್ಷರು, ವಾಸ ನಂ | ಕೈಗಳಿಂದ ಅವರುಗಳ ದೇಹದ ಮೇಲೆ ಹೊಡೆದು ಕರ್ತವ್ಯಕ್ಕೆ ಅಡಚಣೆ ಉಂಟುಮಾಡಿರುತ್ತಾರೆ. ಸುಮಾರು 50-60 ಜನ ರೈತರು ಮತ್ತು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಸಂಘಟನೆಯವರು ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆ ಕಾರ್ಯವು ಸ್ಥಗಿತಗೊಂಡಿದೆ ಎಂದು ಏಕಾಏಕಿ ಎಂ.ಸಿ. ರಸ್ತೆಯ ನಂದ ಸರ್ಕಲ್‌ನಲ್ಲಿ ಸಾರ್ವಜನಿಕ ವಾಹನಗಳನ್ನು ತಡೆದು ಅರ್ಧ ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ಮಾಡಿ, ಪ್ರತಿಭಟನಾಕಾರರನ್ನು ರಸ್ತೆಯಿಂದ ತೆರವುಗೊಳಿಸುವ ಸಮಯದಲ್ಲಿ ಪೊಲೀಸ್ | |

| | | | | | | |
|---|---|---|---|---|---|---|
| | | | | 2710 3ನೇ ಕ್ರಾಸ್ ಗಾಂಧಿನಗರ, ಮಂಡ್ಯ.<br>19) ಎಂ.ಬಿ. ಶ್ರೀನಿವಾಸ ಬಿನ್ ಲೇ. ಬೋರಯ್ಯ, 48 ವರ್ಷ, ದಲಿತ ಸಂಘ ಸಮಿತಿಯ ರಜ್ಯ ಸಂಚಾಲಕರು, ವಾಸ ಹರವು ಗ್ರಾಮ, ಪಾಂಡವಪುರ ತಾ. ಹಾಲಿ ವಾಸ ವಿದ್ಯಾನಗರ 3ನೇ ಕ್ರಾಸ್ ಮಂಡ್ಯ.<br>20) ಬೇಕರಿ ರಮೇಶ್ ಬಿನ್ ಚಿನ್ನಪ್ಪ, 52 ವರ್ಷ, ಕದಂಬ ಸೇನೆ ರಾಜ್ಯ ಅಧ್ಯಕ್ಷರು, ನೆರಹುನಗರ, ಶಿವನಂಜಪ್ಪ ಲೇ ಔಟ್, ಮಂಡ್ಯ.<br>21) ಡಿ. ಅಶೋಕ್ ಬಿನ್ ದಾಸೇಔಡ, 41 ವರ್ಷ, ಒಕ್ಕಲಿಗರು, ಕ.ರ.ವೇ.ಮಂಡ್ಯ ತಾಲ್ಲೂಕ್ ಅಧ್ಯಕ್ಷ ವಾಸ 2ನೇ ಹಂತ ಕಾವೇರಿ ನಗರ, ಹನಿಯಾಂಬಾಡಿ ರಸ್ತೆ, ಮಂಡ್ಯ | ಸಿಬ್ಬಂದಿಯವರನ್ನು ತಳ್ಳಾಡಿ ನೂಕಾಡಿ ಹಲ್ಲೆ ಮಾಡಿದ ಮೇರೆಗೆ. | |

| | | | | | | |
|---|---|---|---|---|---|---|
| | | | | 22) ಕೆ. ಟಿ. ಹನುಮೇಶ್ ಬಿನ್ ತಿಮ್ಮೇಗೌಡ, ಒಕ್ಕಲಿಗರು, ವ್ಯಾಪಾರ ಕೆಲಸ, ಕನ್ನಡ ಸೇನೆ ಯುವ ಅಧ್ಯಕ್ಷರು, ವಾಸ ಕಿರಗಂದೂರು, ಮಂಡ್ಯ ತಾ.<br>23) ಪಾಪಣ್ಣ @ ದೇವಯ್ಯ ಬಿನ್ ಬಡ್ಡಿ ದೇವಯ್ಯ, 48 ವರ್ಷ, ಒಕ್ಕಲಿಗರು, ನಗರ ಸಭೆ ಸದಸ್ಯರು, ವಾಸ ಬಸವನ ಗುಡಿ, ಗುತ್ತಲು ಕಾಲೋನಿ, ಕುವೆಂಪು ಶಾಲೆ ಮುಂಭಾಗ, ಮಂಡ್ಯ ಟೌನ್.<br>24) ಶಿವಲಿಂಗಯ್ಯ ಬಿನ್ ಬಡ್ಡಿ ದೇವಯ್ಯ, 40 ವರ್ಷ, ಕುರುಬ ಜನಾಂಗ, ವ್ಯಾಪಾರ ಕೆಲಸ, 7ನೇ ಕ್ರಾಸ್ ಗುತ್ತಲು ಕಾಲೋನಿ, ಮಂಡ್ಯ<br>25) ಸಿ. ಎಂ. ದ್ಯಾವಪ್ಪ ಬಿನ್ ಲೇಟ್ ಮಂಚೇಗೌಡ, 38 ವರ್ಷ, ಒಕ್ಕಲಿಗರು, ಕಾಂಗ್ರೆಸ್ ಮುಖಂಡರು. ವಾಸ ಚಿಕ್ಕಹಳ್ಳಿ | | |

| | | | | | | |
|---|---|---|---|---|---|---|
| | | | | ಗ್ರಾಮ, ಬಸರಾಳು ಹೋಬಳಿ, ಮಂಡ್ಯ ತಾ.<br>26) ಸತೀಶ ಬಿನ್ ಬೋರೇಗೌಡ, 36 ವರ್ಷ, ಒಕ್ಕಲಿಗರು, ವಾಸ ಮನೆ ನಂ. 167, 7ನೇ ಕ್ರಾಸ್ ಹೊಸಹಳ್ಳಿ ಮಂಡ್ಯ ಸಿಟಿ<br>27) ಮಹೇಶ್ ಬಿನ್ ವೆಂಕಟೇಶ, 28 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ ಹೊಸ ಬೂದನೂರು ಗ್ರಾಮ, ಮಂಡ್ಯ ತಾ.<br>28) ಹೆಚ್.ಬಿ.ಪುಟ್ಟಸ್ವಾಮಿ ಬಿನ್ ಲೇಟ್ ಯಜಮಾನ್ ಬೋರೇಗೌಡ, 29 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ ಬಿ. ಹೊಸಹಳ್ಳಿ ಗ್ರಾಮ, ಮಂಡ್ಯ ತಾ.<br>29) ನಾಗೇಂದ್ರ ಬಿನ್ ಪುಟ್ಟರಮಣ್ಣ, 28 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ ಉಮ್ಮಡಹಳ್ಳಿ ಗ್ರಾಮ, | | |

| | | | | | | |
|---|---|---|---|---|---|---|
| | | | | ಮಂಡ್ಯ ತಾ.<br>30) ಮಹೇಂದ್ರ ಬಿನ್ ರಾಮಲಿಂಗೇಗೌಡ, 26 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ ಹೊಸಬೂದನೂರು ಗ್ರಾಮ, ಮಂಡ್ಯ ತಾ.<br>31) ತಿಮ್ಮಯ್ಯ ಬಿನ್ ದೊಡ್ಡೋನು, 30 ವರ್ಷ, ವ್ಯವಸಾಯ, ವ್ಯವಸಾಯ, ವಾಸ ಹೊಸಬೂದನೂರು, ಮಂಡ್ಯ ತಾ.<br>32) ಆನಂದ ಬಿನ್ ಪಾಪಣ್ಣ, 25 ವರ್ಷ, ವ್ಯವಸಾಯ, ವಾಸ ಹೊಸಬೂದನೂರು, ಮಂಡ್ಯ ತಾ.<br>33) ಲಿಂಗರಾಜು ಬಿನ್ ಬಿಳಿಗಿ ಸಿದ್ದೇಗೌಡ, 28 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ ಮಲ್ಲನಾಯಕನಕಟ್ಟೆ, ಮಂಡ್ಯ. | | |

| | | | | | | |
|---|---|---|---|---|---|---|
| | | | | 34) ರಮೇಶ ಬಿನ್ ದೋಡ್ಡಬೋರಯ್ಯ, 20 ವರ್ಷ, ವ್ಯವಸಾಯ, ವಾಸ 3ನೇ ಕ್ರಾಸ್ ಹೊಸಹಳ್ಳಿ, ಮಂಡ್ಯ.<br>35) ಮನೋಜ್ ಬಿನ್ ನಿಂಗೇಗೌಡ, 27 ವರ್ಷ, ವಕ್ಕಲಿಗರು, ವ್ಯವಸಾಯ, ವಾಸ ಮಲ್ಲಿನಾಯಕನಕಟ್ಟೆ, ಮಂಡ್ಯ ತಾ<br>36) ಷಣ್ಮುಖೇಗೌಡ ಬಿನ್ ಲೇಟ್ ಪುಟ್ಟಸ್ವಾಮಿ, 42 ವಷ್, ವಕ್ಕಲಿಗರು, ಪತ್ರಕರ್ತ, 1ನೇ ಕ್ರಾಸ್ ತಾವರೆಗೆರೆ, ಮಂಡ್ಯ ಸಿಟಿ.<br>37) ಅನು ಸತೀಶ್ ಎಸ್ ಬಿನ್ ಸಿದ್ದೇಗೌಡ, 41 ವರ್ಷ, ಓರಿಯಂಟಲ್ ನ್ಯೂಸ್ ಸರ್ವೀಸ್ ಜಿಲ್ಲಾ ವರದಿಗಾರರ, ವಾಸ ನಂ. 167, 8ನೇ ಕ್ರಾಸ್, ಸ್ವರ್ಣ ಸಂದ್ರ, ಮಂಡ್ಯ. | | |

| | | | | | | |
|---|---|---|---|---|---|---|
| 2 | ಪೂರ್ವ | 238/12 ಕಲಣ 143– 341–283 ಕೂಡ 149 ಐಪಿಸಿ | ಎಂ. ಮಂಜುನಾಥ ಪಿ.ಎಸ್.ಐ. ಮಂಡ್ಯ ಪೂರ್ವ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ | 1) ಸುಂದರಬಿನ್ ಚಾಮುಂಡಿಗೌಡ 35 ವರ್ಷ, ಒಕ್ಕಲಿಗರು, ವ್ಯವಸಾಯ, 1ನೇ ಮೈನ್ ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ.<br>2)ನಿಖಿನ್ ಬಿನ್ ಕೇರಾಫ್ ಚಾಮಯ್ಯ, 28 ವರ್ಷ, ಒಕ್ಕಲಿಗರು, ವ್ಯವಸಾಯ, 1ನೇ ಮೈನ್, ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ.<br>3) ನಿರ್ಮಲ ಚಿಕ್ಕೇಗೌಡ ಕೋಂ ಚಿಕ್ಕೇಗೌಡ 40 ವಷ್, ಒಕ್ಕಲಿಗರು, ಮಾಜಿ ಕೌನ್ಸಿಲರು, ಮಾರಮ್ಮದೇವಸ್ಥಾನದ ಬೀದಿ, ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ<br>4) ಶ್ರೀನಿವಾಸ್ ಬಿನ್ ಲೇಟ್ ಲಿಂಗಯ್ಯ 45 ವರ್ಷ, ಒಕ್ಕಲಿಗರು, ಅಂಗಡಿ ವ್ಯಾಪಾರ, 1ನೇ ಮೈನ್, ಚಿಕ್ಕೇಗೌಡನದೊಡ್ಡಿ, ಮಂಡ್ಯ | ದಿನಾಂಕ: 02.10.2012ರಂದು ಪಿರ್ಯಾದಿಯವರು ಮತ್ತು ಸಿಬ್ಬಂದಿಯವರುಗಳು ಎಸ್.ಎಫ್ ಸರ್ಕಲ್‌ನಲ್ಲಿ ಬಂದೋಬಸ್ತ್ ಕರ್ತವ್ಯದಲ್ಲಿದ್ದಾಗ ಠಾಣಾ ಸರಹದ್ದಿನ ಚಿಕ್ಕೇಗೌಡನ ದೊಡ್ಡಿ ಗ್ರಾಮದ ಸುಮಾರು 70–80 ಜನ ಉದ್ದೇಶ ಪೂರ್ವಕವಾಗಿ ಮೈಷುಗರ್ ಪ್ರೌಢಶಾಲೆಯ ಮುಂದಿನ ಬೆಂಗಳೂರು–ಮೈಸೂರು ಹೆದ್ದಾರಿ ರಸ್ತೆಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಮತ್ತು ಮೈಸೂರಿನಿಂದ ಬೆಂಗಳೂರಿಗೆ ಹೋಗುವ ಎರಡು ರಸ್ತೆಯ ಪಥಗಳಲ್ಲಿ ಕುಳಿತು ಜೊತೆಯಲ್ಲಿ ರಸ್ತೆಗೆ ಎತ್ತಿನಗಾಡಿ ಹಾಗೂ ದನ | ಪ್ರಕರಣವು ಸಿಸಿ ನಂ. 821/13 ರಲ್ಲಿ ಗೌರವಾನ್ವಿತ ಪಿಸಿಜೆ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಂಡ್ಯ ಇಲ್ಲಿ ವಿಚಾರಣೆಯಲ್ಲಿದೆ. ಮುಂದಿನ ವಿಚಾರಣಾ ದಿನಾಂಕ:10–09–14ಕ್ಕೆ ನಿಗದಿಯಾಗಿರುತ್ತದೆ |

| | | | | | | |
|---|---|---|---|---|---|---|
| | | | | ಸಿಟಿ.<br>5) ಶಂಕರ್ ಬಿನ್ ಲೇಟ್ ಕೆಂಪೇಗೌಡ 40 ವರ್ಷ, ಒಕ್ಕಲಿಗರು, ಕೂಲಿಕೆಲಸ, 1ನೇ ಮೈನ್, ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ.<br>6) ಜಯರಾಮು ಬಿನ್ ಲೇಟ್ ಹುಚ್ಚಯ್ಯ 55 ವರ್ಷ, ಒಕ್ಕಲಿಗರು, ಹೋಟೇಲ್ ವ್ಯಾಪಾರ, 1ನೇ ಮೈನ್ ಚಿಕ್ಕೇಗೌಡನದೊಡ್ಡಿ, ಮಂಡ್ಯ<br>7) ಚಲುವರಾಜು ಬಿನ್ ಲೇಟ್ ಬನ್ನಳ್ಳಿ ತಮ್ಮಯ್ಯ 45 ವರ್ಷ, ಒಕ್ಕಲಿಗರು, ಕೂಲಿಕೆಲಸ 1ನೇ ಮೈನ್ 2ನೇ ಕ್ರಾಸ್ ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ<br>8) ರಮೇಶ್ ಬಿನ್ ಲೇಟ್ ಶ್ರೀನಿವಾಸ 35 ವರ್ಷ, ಅಟೋಚಾಲಕ, ಕುರುಬರು, ಕುರುಬರ ಬೀದಿ | ಕರುಗಳನ್ನು ಕಟ್ಟಿಕೊಂಡು ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸುತ್ತಿರುವುದಾಗಿ ಬಾತ್ಮಿದಾರರಿಂದ ಮಾಹಿತಿ ತಿಳಿದು ಬಂದ ಮೇರೆಗೆ ಕೂಡಲೇ ಸಿಬ್ಬಂದಿಯವರ ಸಮೇತ ಸ್ಥಳಕ್ಕೆ ಹೋಗಿ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದ ಪ್ರತಿಭಟನಾಕಾರರಿಗೆ ರಸ್ತೆ ತಡೆಯನ್ನು ತೆರವುಗೊಳಿಸುವಂತೆ ತಿಳುವಳಿಕೆ ನೀಡಿದರೂ ಧಿಕ್ಕರಿಸಿ ತಮಿಳುನಾಡು ಮುಖ್ಯ ಮಂತ್ರಿ ಜಯಲಲಿತರವರ ಪ್ರತಿಕೃತಿಯನ್ನು ದಹನ ಮಾಡಿ ರಸ್ತೆಯಲ್ಲಿ ಸಾರ್ವಜನಿಕರು ತಿರುಗಾಡುವುದಕ್ಕೆ ತೊಂದರೆ ಆಗುವ ರೀತಿಯಲ್ಲಿ ರಾಜ್ಯಹೆದ್ದಾರಿ | |

| | | | | | | |
|---|---|---|---|---|---|---|
| | | | | ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ.<br>9) ಯೋಗಿ ಬಿನ್ ಲೇಟ್ ವೆಂಕಟೇಶ್ 30 ವರ್ಷ, ಗಾರೆ ಮೇಸ್ತರಿ ಕೆಲಸ, ಪರಿಶಿಷ್ಟ ಜಾತಿ, 1ನೇ ಮೈನ್, 2ನೇ ಕ್ರಾಸ್ ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ<br>10) ಪ್ರಶಾಂತ್ 28 ವರ್ಷ, ಕೂಲಿಕೆಲಸ, 2ನೇ ಮೈನ್, ಚಿಕ್ಕೇಗೌಡನದೊಡ್ಡಿ, ಮಂಡ್ಯ ಸಿಟಿ | ರಸ್ತೆಯಲ್ಲಿ ರಸ್ತೆ ತಡೆಯನ್ನು ಮಾಡುತ್ತಿರುವುದರಿಂದ ಸ್ವ-ವರದಿ ತಯಾರಿ ಪ್ರತಿಭಟನಾಕಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತೆ. | |
| 3 | ಪೂರ್ವ | 239/12 ಕಲಂ 143-341 ಕೂಡ 149 ಐಪಿಸಿ | ಎಂ. ಮಂಜುನಾಥ್ ಪಿ.ಎಸ್.ಐ. ಮಂಡ್ಯ ಪೂರ್ವ ಪೊಲೀಸ್ ಠಾಣೆ ಮಂಡ್ಯ ಜಿಲ್ಲೆ. | 1. ಪದ್ಮಾವತಿ ಕೋಂ ರವಿ, ಎಂ. ಎಸ್. 35 ವರ್ಷ, ಮಡಿವಾಳ ಶೆಟ್ಟಿ ಜನಾಂಗ, ಮಾಜಿ ಕೌನ್ಸಿಲರು, ನಂ.457, 10ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ ಸಿಟಿ.<br>2. ದಿನೇಶ @ ಥರ್ಟಿ ದಿನಿ, ಬಿನ್ ಲೇಟ್ ನರಸಿಂಗ ಮೂರ್ತಿ, ನಂ. 217, 40 | ದಿನಾಂಕ: 03.10.12 ರಂದು ಪಿರ್ಯಾದಿಯವರು ಮತ್ತು ಸಿಬ್ಬಂದಿಯವರುಗಳು ಎಸ್ ಎಫ್ ಸರ್ಕಲ್‌ನಲ್ಲಿ ಬಂದೋಬಸ್ತ್ ಕರ್ತವ್ಯದಲ್ಲಿದ್ದಾಗ, ಠಾಣಾ ಸರಹದ್ದಿನ ಸ್ವರ್ಣಸಂದ್ರ ಗ್ರಾಮದ ಸುಮಾರು 60-70 ಜನ ಉದ್ದೇಶ | ಪ್ರಕರಣವು ಸಿ.ಸಿ. ನಂ. 830/13 ರಲ್ಲಿ ಗೌರವಾನ್ವಿತ ಪಿಸಿಜೆ ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಮಂಡ್ಯ ಇಲ್ಲಿ ವಿಚಾರಣೆಯಲ್ಲಿದೆ ಮುಂದಿನ ವಿಚಾರಣಾ ದಿನಾಂಕ: 31.07.14 |

| | | | | | | |
|---|---|---|---|---|---|---|
| | | | | ವರ್ಷ, ಶೆಟ್ಟರು ಜನಾಂಗ, ಕೂಲಿಕೆಲಸ, 9ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ ಸಿಟಿ<br>3. ಶಿವನಂಜು ಬಿನ್ ನಾಥಪ್ಪ 50 ವರ್ಷ, ಒಕ್ಕಲಿಗರು, ವ್ಯಾಪಾರ ಕೆಲಸ, ಮತ್ತು ನಂಜುಂಡೇಶ್ವರ ಕಲ್ಯಾಣ ಮಂಟಪ ಮಾಲೀಕರು, ಮನೆ. ನಂ. 81, 5ನೇ ಕ್ರಾಸ್ ಸ್ವರ್ಣಸಂದ್ರ, ಮಂಡ್ಯ ಸಿಟಿ.<br>4. ಬಾಸ್ಕರ್ ಜಾಯ್ ಬಿನ್ ಜೋಸೆಫ್ 45 ವರ್ಷ, ಕ್ರಿಶ್ಚಿಯನ್ ಜನಾಂಗ್, ಕೂಲಿಕೆಲಸ, ನಂ. 421 10ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ<br>5. ದ್ಯಾವಯ್ಯ ಬಿನ್ ಲೇಟ್ ದೇವಯ್ಯ 50 ವರ್ಷ, ಪರಿಶಿಷ್ಟ ಜನಾಂಗ, ವ್ಯವಸಾಯ, ನಂ. 474, 11ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ.<br>6. ಕೂಳಗೆರೆ ಕೃಷ್ಣ 40 | ಪೂರ್ವಕವಾಗಿ ಸ್ವರ್ಣಸಂದ್ರ ಆಟೋ ನಿಲ್ದಾಣದ ಮುಂದಿನ ಬೆಂಗಳೂರು–ಮೈಸೂರು ಹೆದ್ದಾರಿ ರಸ್ತೆಯಲ್ಲಿ ಬೆಳಿಗೆ 9–00 ಗಂಟೆಯಲ್ಲಿ, ಮತ್ತು ಎಸ್ಎಫ್ ವೃತ್ತದಲ್ಲಿ ಬೆಳಿಗ್ಗೆ 11–00 ಗಂಟೆಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಮತ್ತು ಮೈಸೂರಿನಿಂದ ಬೆಂಗಳೂರಿಗೆ ಹೋಗುವ ಎರಡು ರಸ್ತೆಯ ಪಥಗಳಲ್ಲಿ ಕುಳಿತು ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸುತ್ತುರುವುದಾಗಿ ಬಾತ್ಮೀದಾರರಿಂದ ಮಾಹಿತಿ ತಿಳಿದು ಬಂದ ಮೇರೆಗೆ ಕೂಡಲೇ ಪಿರ್ಯಾದಿಯವರು ಸಿಬ್ಬಂದಿಯವರ ಸಮೇತ ಸ್ಥಳಕ್ಕೆ ಹೋಗಿ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದ | ಕ್ಕೆ ನಿಗದಿಯಾಗಿದೆ. |

| | | | | | | |
|---|---|---|---|---|---|---|
| | | | | ವರ್ಷ, ಒಕ್ಕಲಿಗರು, ಕಾರ್ ಚಾಲಕ, ಮನೆ ನಂ. 194, 9ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ ಸಿಟಿ.<br>7. ರಮೇಶ್ ಬಿನ್ ಲೇಟ್ ಅಣ್ಣೇಗೌಡ 40 ವರ್ಷ, ಒಕ್ಕಲಿಗರು, ನಂ. 28 3ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯಸಿಟಿ<br>8. ಮಹೇಶ ಬಿನ್ ಚಿಕ್ಕಮರೀಗೌಡ 32 ವರ್ಷ, ಒಕ್ಕಲಿಗರು, ಸಮಾಜ ಸೇವಕ, ನಂ.6, 2ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯಸಿಟಿ<br>9. ತಿಮ್ಮರಾಜು 40 ವರ್ಷ, ಒಕ್ಕಲಿಗರು, ಲ್ಯಾಂಡ್ ಡೆವಲಪರ್ ಕೆಲಸ, ನಂ. 85 5ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯಸಿಟಿ.<br>10. ಕೇಶವ ಬಿನ್ ಲೇಟ್ ತಿಮ್ಮದಾಸಿ 30 ವರ್ಷ, ಮಡಿವಾಳ ಶೆಟ್ಟರು ಜನಾಂಗ, | ಪ್ರತಿಭಟನಾಕಾರರಿಗೆ ರಸ್ತೆ ತಡೆಯನ್ನು ತೆರವುಗೊಳಿಸುವಂತೆ ತಿಳುವಳಿಕೆ ನೀಡಿದರೂ ಧಿಕ್ಕರಿಸಿ ಸಾರ್ವಜನಿಕರು ತಿರುಗಾಡುವುದಕ್ಕೆ ತೊಂದರೆ ಆಗುವ ರೀತಿಯಲ್ಲಿ ರಾಜ್ಯ ಹೆದ್ದಾರಿಯಲ್ಲಿ ರಸ್ತೆ ತಡೆಯನ್ನು ಮಾಡುತ್ತಿದ್ದರಿಂದ ಸ್ವ-ವರದಿ ತಯಾರಿಸಿ ಪ್ರತಿಭಟನಕಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತೆ. | |

| | | | | | | |
|---|---|---|---|---|---|---|
| | | | | ಬಡ್ಡಿ ಲೇವಾದೇವಿ, 12ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ.<br>11. ಮಂಗಳ್ಳಿ ಕೃಷ್ಣ ಬಿನ್ ಲೇಟ್ ಶಂಕರಣ್ಣ 42 ವರ್ಷ, ಒಕ್ಕಲಿಗರು, ಬಡ್ಡಿ, ಲೇವಾದೇವಿ, 3ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ ಸಿಟಿ.<br>12. ಈರಣ್ಣ ಕೇರಾಫ್ ಎಂ. ಲಿಂಗಯ್ಯ 45 ವರ್ಷ, ಒಕ್ಕಲಿಗರು, ಜೆರಾಕ್ಸ್ ಅಂಗಡಿ ವ್ಯಾಪಾರ, ನಂ. 285, 3ನೇ ಕ್ರಾಸ್, ಸ್ವರ್ಣಸಂದ್ರ, ಮಂಡ್ಯ.<br>13. ಹಾಲಿನ ಡೈರಿ ಪಾಪಣ್ಣ 45 ವರ್ಷ, ಒಕ್ಕಲಿಗರು, ಹಾಲಿನ ವ್ಯಾಪಾರ, ನಂ. 30, 3ನೇ ಕ್ರಾಸ್, ಸ್ವರ್ಣಸಂದ್ರ. ಮಂಡ್ಯ ಸಿಟಿ.<br>14. ಚಂದ್ರ ಬಿನ್ ಲೇಟ್ ಸಿದ್ದಯ್ಯ 36 ವರ್ಷ, ಕುರುಬ ಜನಾಂಗ, ಆಟೋ ಚಾಲಕ, ನಂ 393, 9ನೇ ಕ್ರಾಸ್, | | |

| | | | | | | |
|---|---|---|---|---|---|---|
| | | | | ಸ್ವರ್ಣಚಂದ್ರ, ಮಂಡ್ಯ ಸಿಟಿ. 15. ಪದ್ಮ ಕೋಂ ಕೆಂಚೇಗೌಡ 42 ವರ್ಷ, ಒಕ್ಕಲಿಗರು, ಹಾಲಿನ ವ್ಯಾಪಾರ, ಮನೆ ನಂ. 360, 11ನೇ ಕ್ರಾಸ್ ಸ್ವರ್ಣಸಮದ್ರ, ಮಂಡ್ಯ ಸಿಟಿ | | |
| 4 | ಪಶ್ಚಿಮ ಪೊಲೀಸ್ ಠಾಣೆ | 263/12 ಕಲಂ 143– 188–341 ರೆವಿ 149 ಐ.ಪಿ.ಸಿ. | ಕೆ.ಎಸ್. ನಿರಂಜನ ಪಿ.ಎಸ್.ಐ., ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ | ಮಂಡ್ಯ ನಗರ ಮತ್ತು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಸ್ಥರು ಮತ್ತು ಕೆಲವು ಸಂಘಟನೆಗಳ ಕಾರ್ಯಕರ್ತರು, ಹೆಸರು ವಿಳಾಸ ತಿಳಿಯಬೇಕಿದೆ. | ದಿನಾಂಕ 30.09.2012 ರಂದು ಬೆಳಿಗ್ಗೆ 10.30 ಗಂಟೆಯಲ್ಲಿ ಮಂಡ್ಯ ನಗರದ ವಿಶ್ವೇಶ್ವರಯ್ಯ ಪ್ರತಿಮೆ ಮುಂದೆ ಎಂ. ಸಿ. ರಸ್ತೆಯಲ್ಲಿ ಮಂಡ್ಯನಗರ ಮತ್ತು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಸ್ಥರು ಮತ್ತು ಕೆಲವು ಸಂಘಟನೆಗಳ ಕಾರ್ಯಕರ್ತರು ಕಾವೇರಿ ನದಿ ನೀರನ್ನು ಕೆ. ಆರ್. ಸಾಗರದಿಂದ ತಮಿಳುನಾಡಿಗೆ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಅಕ್ರಮ | ಸಿ.ಸಿ. ನಂ. 584/13 ರಲ್ಲಿ ಘನ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. |

| | | | | | | |
|---|---|---|---|---|---|---|
| | | | | | ಗುಂಪುಕಟ್ಟಿಕೊಂಡು ಬಂದು ರಾಜ್ಯ ಸರ್ಕಾರಕ್ಕೆ ಧಿಕ್ಕಾರ, ಕೇಂದ್ರ ಸರ್ಕಾರಕ್ಕೆ ಧಿಕ್ಕಾರ, ಕೆ.ಆರ್. ಸಾಗರದಿಂದ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಿ ಮಂಡ್ಯ ರೈತರಿಗೆ ಅನ್ಯಾಯವೆಸಗಿರುತ್ತಾರೆಂದು ಘೋಷಣೆಗಳನ್ನು ಕೂಗುತ್ತಾ ರಸ್ತೆಯಲ್ಲಿ ಓಡಾಡುವ ವಾಹನಗಳು ಮತ್ತು ಸಾರ್ವಜನಿಕರು ಸಂಚರಿಸದಂತೆ ಅಡಚಣೆ ಉಂಟು ಮಾಡಿರುತ್ತಾರೆಂದು ಇತ್ಯಾದಿ. | |
| 5 | ಪಶ್ಚಿಮ ಪೊಲೀಸ್ ಠಾಣೆ | 266/12 ಕಲಂ 143, 341 ರೆ/ವಿ 149 ಐ.ಪಿ.ಸಿ. | ಕೆ.ಎಸ್. ನಿರಂಜನ, ಪಿಎಸ್ಐ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ | ಮಂಡ್ಯ ನಗರ ಮತ್ತು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಸ್ಥರು ಮತ್ತು ಕೆಲವು ಸಂಘಟನೆಗಳ ಕಾರ್ಯಕರ್ತರು, ಹೆಸರು ವಿಳಾಸ ತಿಳಿಯಬೇಕಿದೆ | ದಿನಾಂಕ: 01.10.2012ರಂದು ಬೆಳಿಗ್ಗೆ 10-30 ಗಂಟೆಯಲ್ಲಿ ಮಂಡ್ಯ ನಗರದ ವಿಶ್ವೇಶ್ವರಯ್ಯ ಪ್ರತಿಮೆ ಮುಂದೆ ಎಂ. ಸಿ. | ಸಿಸಿ ನಂ. 602/13 ರಲ್ಲಿ ಘನ ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ. |

| | | | | | | |
|---|---|---|---|---|---|---|
| | | | | | ರಸ್ತೆಯಲ್ಲಿ ಮಂಡ್ಯ ನಗರ ಮತ್ತು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಸ್ಥರು ಮತ್ತು ಕೆಲವು ಸಂಘಟನೆಗಳ ಕಾರ್ಯಕರ್ತರು ಕಾವೇರಿ ನದಿ ನೀರನ್ನು ಕೆ.ಆರ್.ಸಾಗರದಿಂದ ತಮಿಳುನಾಡಿಗೆ ಬಿಡಗುಡೆ ಮಾಡಿರುವ ಹಿನ್ನೆಲೆಯಲ್ಲಿ ಅಕ್ರಮ ಗುಂಪುಕಟ್ಟಿಕೊಂಡು ಬಂದು ರಸ್ತೆಯಲ್ಲಿ ಓಡಾಡುವ ವಾಹನಗಳು ಮತ್ತು ಸಾರ್ವಜನಿಕರು ಸಂಚರಿಸದಂತೆ ಅಡಚಣೆ ಉಂಟುಮಾಡಿರುತ್ತಾರೆಂದು ಇತ್ಯಾದಿ. | |
| 6 | ಪಶ್ಚಿಮ ಪೊಲೀಸ್ | 268/12 ಕಲಂ 143, 341, 427 | ವೈ. ಕೆ. ಅಶ್ವಥ್ ಬಿನ್ ವೈ. ಕೆ. | ಸುಮಾರು 8 ರಿಂದ 10 ಜನ ಕಾವೇರಿ ಚಳವಳಿಯ | ದಿನಾಂಕ: 04.10.2012 ರಂದು ಮಧ್ಯಾಹ್ನ 1.00 | ಸಿಸಿ ನಂ. 601/13 ರಲ್ಲಿ ಘನ |

| | | | | | | |
|---|---|---|---|---|---|---|
| | ಠಾಣೆ | ರೆ/ವಿ 149 ಐ.ಪಿ.ಸಿ. | ಕೆಂಪಣ್ಣ ಚಲನಚಿತ್ರ ನಟರು, ವಾಸ ನಂ. 73 ಮಂನುನಾಥ ನಿಲಯ, ಭಕ್ತ ಮಾರ್ಕಂಡೇಯ ಲೇಔಟ್, 4ನೇ ಕ್ರಾಸ್, ವಿಠಲ್‌ನಗರ, ಚಾಮರಾಜಪೇಟೆ ಬೆಂಗಳೂರು | ಪ್ರತಿಭಟನಾಕಾರರು | ಗಂಟೆಯಲ್ಲಿ ಪಿರ್ಯಾದಿಯು ತಮ್ಮ ಸ್ನೇಹಿತ ಅಶೋಕ್ ಮತ್ತು ಡ್ರೈವರ್ ದಿವಾಕರ್ ರವರೊಂದಿಗೆ ಮೈಸೂರಿನಿಂದ ಬೆಂಗಳೂರಿಗೆ ತಮ್ಮ ಬಾಬ್ತು ಕೆಎ-02 ಎಂಜಿ-6075 ನಂಬರಿನ ಕಾರಿನಲ್ಲಿ ಹೋಗುವಾಗ ಮಂಡ್ಯದ ಮಹಾವೀರ ಸರ್ಕಲ್ ಹತ್ತಿರ ನಗರಸಭೆ ಮುಂಭಾಗ ಕಾವೇರಿ ನದಿ ನೀರಿನ ವಿಚಾರದಲ್ಲಿ ಮುಷ್ಕರ ನಡೆಸುತ್ತಿದ್ದ ಸುಮಾರು 8-10 ಜನ ಪ್ರತಿಭಟನಾಕಾರರು ಪಿರ್ಯಾದಿಯವರ ಕಾರನ್ನು ಸುತ್ತಲೂ ಮುತ್ತಿಕೊಂಡು ಕಾರಿನಲ್ಲಿದ್ದವರು ಕೆಳಕ್ಕೆ ಇಳಿಯದಂತೆ ತಡೆದು ಕಾರಿನ ಮುಂಭಾಗದ ಗ್ಲಾಸ್ ಮತ್ತು ಕಾರಿನ ಸುತ್ತಾಮುತ್ತ ಬಾಡಿಯನ್ನು | ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ. |

| | | | | | | |
|---|---|---|---|---|---|---|
| | | | | | ಕೈಗಳಿಂದ ಗುದ್ದಿ ಜಖಂಗೊಳಿಸಿರುತ್ತಾರೆಂದು ಇತ್ಯಾದಿ. | |
| 7 | ಪಶ್ಚಿಮ ಪೊಲೀಸ್ ಠಾಣೆ | 269/12 ಕಲಂ 143. 504-353 341, ರೆ/ವಿ 149 ಐ.ಪಿ.ಸಿ. | ಕೆ.ಎಸ್ ನಿರಂಜನ ಪಿ.ಎಸ್.ಐ. ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ | 1) ಶಶಿಕುಮಾರ್ 2) ವೆಂಕಟೇಶ್ 3) ಉಮಾಶಂಕರ 4) ಸಂತೋಷ 5) ಸಿದ್ದರಾಜುಗೌಡ 6) ಸತೀಶಗೌಡ 7) ಕೇಬಲ್ ಕೃಷ್ಣ 8) ಪ್ರತಾಪ 9) ಚಂದ್ರ 10) ಶಂಕರ 11) ವಿನಯಕುಮಾರ್ 12) ಜವರೇಗೌಡ 13) ಪಾಪು 14) ಜಯರಾಮು, 15) ಮೊಳ್ಳೇಗೌಡ 16) ಮೋಹನ್ 17) ಕೃಷ್ಣಪ್ರಸಾದ್ 18) ಎಂ. ಬಿ. ನಾಗಣ್ಣಗೌಡ 19) ರಾಮಾಚಾರಿ 20) ಸಿ.ಟಿ. ಮಂಜುನಾಥ್ 21) ಸತೀಶ 22) ಜಿತೇಂದ್ರ 23) ಕೆ. ಪಿ. ಚಂದನ್ 24) ಸತೀಶ 25) ಜೋಗಿ ಹಾಗೂ ಇತರೆ. | ದಿನಾಂಕ: 04.10.2012 ರಂದು ಕಾವೇರಿ ಜಲ ವಿವಾದ ಹಿನ್ನೆಲೆಯಲ್ಲಿ ಕಾವೇರಿ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ಮಾದೇಗೌಡ ರವರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಸರ್. ಎಂ. ವಿಶ್ವೇಶ್ವರಯ್ಯ ಪ್ರತಿಮೆ ಬಳಿಗೆ ಕರ್ನಾಟಕ ರಾಜ್ಯ ವಿಧಾನಸಭೆಯ ಪ್ರತಿಪಕ್ಷ ನಾಯಕರಾದ ಶ್ರೀ ಸಿದ್ಧರಾಮಯ್ಯನವರು ಆಗಮಿಸಿ ವೇದಿಕೆಗೆ ಬಂದಾಗ ಚಳುವಳಿ ನಡೆಸುತ್ತಿದ್ದ ಮೇಲ್ಕಂಡ ಆರೋಪಿತರುಗಳು ಸೇರಿಕೊಂಡು ಅವರನ್ನು ವೇದಿಕೆಯಿಂದ ಹೊರಗೆ | ಸಿಸಿ ನಂ. 654/13 ರಲ್ಲಿ ಘನ ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ |

| | | | | | | |
|---|---|---|---|---|---|---|
| | | | | | ಹೋಗುವಂತೆ ಪ್ರತಿಭಟಿಸಿ, ಅವರು ವೇದಿಕೆ ಹತ್ತದಂತೆ ತಡೆದು ಗಲಭೆ ಎಬ್ಬಿಸಿದಾಗ ಅಲ್ಲೆ ಇದ್ದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಗುಂಪನ್ನು ಚದುರಿಸಿ ಸಿದ್ದರಾಮಯ್ಯರವರಿಗೆ ರಕ್ಷಣೆ ನೀಡಿ ಕಾರನ್ನು ಹತ್ತಿಸಲು ಮುಂದಾದಾಗ ಗುಂಪು ಸೇರಿದ್ದ ಮೇಲ್ಕಂಡ ಆರೋಪಿತರುಗಳು ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕರ್ತವ್ಯಕ್ಕೆ ಅಡ್ಡಿಯುಂಟು ಮಾಡಿರುತ್ತಾರೆ. | |
| 8 | ಪಶ್ಚಿಮ ಪೊಲೀಸ್ ಠಾಣೆ | 270/12 ಕಲಂ 143, 332, ರೆ/ವಿ 149 ಐಪಿಸಿ | ಎನ್. ಮಂಜುನಾಥ್ ಬಿನ್ ಲೇಟ್ ಎಸ್. ನಂದಿಬಸಪ್ಪ | ಯಾರೋ ಕಿಡಿಗೇಡಿಗಳು, ಹೆಸರು ವಿಳಾಸ ತಿಳಿಯಬೇಕಾಗಿದೆ | ದಿನಾಂಕ: 04.10.2012ರಂದು ಕಾವೇರಿ ಜಲ ವಿವಾದ ಹಿನ್ನೆಲೆಯಲ್ಲಿ ಕಾವೇರಿ ಹಿತರಕ್ಷಣಾ ಸಮಿತಿಯ | ಸಿಸಿ. ನಂ. 655/13 ರಲ್ಲಿ ಘನ ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ |

| | | | | | | |
|---|---|---|---|---|---|---|
| | | | ಹೆಚ್ ಸಿ – 29, ಪ್ರಾಯ 56 ವರ್ಷ, ಲಿಂಗಾಯತರು, 1ನೇ ಬೆಟಾಲಿಯನ್ ಕೆಎಸ್‌ಅರ್‌ಪಿ ನಂ. 60, ರಿಚ್‌ಮಂಡ್ ರಸ್ತೆ, ಬೆಂಗಳೂರು–25 | | ಅಧ್ಯಕ್ಷರಾದ ಶ್ರೀ ಜಿ. ಮಾದೇಗೌಡ ರವರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಎಂ. ಸಿ. ರಸ್ತೆಯ ಪಕ್ಕದಲ್ಲಿರುವ ಸರ್. ಎಂ. ವಿಶ್ವೇಶ್ವರಯ್ಯ ಪ್ರತಿಮೆ ಬಳಿಗೆ ಕರ್ನಾಟಕ ರಾಜ್ಯ ವಿಧಾನಸಭೆಯ ಪ್ರತಿಪಕ್ಷ ನಾಯಕರಾದ ಶ್ರೀ ಸಿದ್ದರಾಮಯ್ಯರವರು ಆಗಮಿಸಿ, ವೇದಿಕೆಗೆ ಬಂದಾಗ ಚಳುವಳಿ ನಡೆಸುತ್ತಿದ್ದವರು ಶ್ರೀ ಸಿದ್ದರಾಮಯ್ಯ ರವರಿಗೆ ವೇದಿಕೆಗೆ ಬರದಂತೆ ಅಡ್ಡಿಪಡಿಸಿ ಗಲಭೆ ಎಬ್ಬಿಸಿದಾಗ, ಶ್ರೀಸಿದ್ಧರಾಮಯ್ಯರವರಿಗೆ ಸೂಕ್ತ ರಕ್ಷಣೆ ನೀಡಿ ಕಾರನ್ನು ಹತ್ತಿಸಿ ಕಳುಹಿಸಿದ ಮೇಲೆ ಮಧ್ಯಾಹ್ನ 2–00 ಗಂಟೆಯಲ್ಲಿ ಆಕ್ರೋಶಗೊಂಡ | |

| | | | | | | |
|---|---|---|---|---|---|---|
| | | | | | ಕಿಡಿಗೇಡಿಗಳು ಕರ್ತವ್ಯದ ಮೇಲಿದ್ದ ಪೊಲೀಸರತ್ತ ಕಲ್ಲು ತುರಾಟ ಮಾಡಿದಾಗ ಕಲ್ಲೊಂದು ಪಿರ್ಯಾದಿಯವರ ಬಲಮಂಡಯ ಮೇಲೆ ಬಿದ್ದು ಗಾಯವಾಗಿ ನೋವುಂಟಾಗಿದ್ದು, ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಿತರ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸುವಂತೆ ಇತ್ಯಾದಿಯಾಗಿ ನೀಡಿದ ದೂರು. | |
| 9 | ಪಶ್ಚಿಮ ಪೊಲೀಸ್ ಠಾಣೆ | 274/12 ಕಲಂ 143, 341 ರೆ/ವಿ 149 ಐಪಿಸಿ | ಕೆ. ಎಸ್. ನಿರಂಜನ ಪಿಎಸ್ಐ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ | ಮಂಡ್ಯ ನಗರದ ಕಲ್ಲಹಳ್ಳಿ ಮತ್ತು ವಿ.ವಿ. ನಗರ ಸುತ್ತಮುತ್ತಲಿನ ನಿವಾಸಿಗಳು, ಹೆಸರು ವಿಳಾಸ ತಿಳಿಯಬೇಕಿದೆ | ದಿನಾಂಕ: 07.10.2012ರಂದು ಬೆಳಿಗ್ಗೆ 11.00 ಗಂಟೆಯಲ್ಲಿ ಮಂಡ್ಯ ನಗರದ ಕಲ್ಲಹಳ್ಳಿ ಸರ್ಕಲ್ ಬಳಿ ಎಂ.ಸಿ. ರಸ್ತೆಯಲ್ಲಿ ಮಂಡ್ಯ ನಗರದ ಕಲ್ಲಹಳ್ಳಿ ಮತ್ತು ವಿ. ವಿ. ನಗರ ಸುತ್ತಮುತ್ತಲಿನ ನಿವಾಸಿಗಳು ಕಾವೇರಿ | ಸಿಸಿ ನಂ. 580/13 ರಲ್ಲಿ ಘನ ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ |

| | | | | | | |
|---|---|---|---|---|---|---|
| | | | | | ನದಿನೀರನ್ನು ಕೆ. ಆರ್. ನಗರದಿಂದ ತಮಿಳುನಾಡಿಗೆ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಅಕ್ರಮ ಗುಂಪು ಒಟ್ಟಿಕೊಂಡು ಬಂದು ರಾಜ್ಯ ಸರ್ಕಾರಕ್ಕೆ ಧಿಕ್ಕಾರ, ಕೇಂದ್ರ ಸರ್ಕಾರಕ್ಕೆ ಧಿಕ್ಕಾರ, ಕೆ. ಆರ್. ಸಾಗರದಿಂದ ನೀರನ್ನು ತಮಿಳಿನಾಡಿಗೆ ಬಿಡುಗಡೆ ಮಾಡಿ ಮಂಡ್ಯ ರೈತರಿಗೆ ಅನ್ಯಾಯ ವೆಸಗಿರುತ್ತಾರೆಂದು ಘೋಷಣೆಗಳನ್ನು ಕೂಗುತ್ತಾ ರಸ್ತೆಯಲ್ಲಿ ಓಡಾಡುವ ವಾಹನಗಳ ಮತ್ತು ಸಾರ್ವಜನಿಕರು ಸಂಚರಿಸದಂತೆ ಅಡಚಣೆ ಉಂಟು ಮಾಡಿದ್ದು ಪೊಲೀಸರು ಈ ರೀತಿ ರಸ್ತೆ ತಡೆ ಮಾಡುವುದು ಅಪರಾಧ, ಇಲ್ಲಿಂದ ತೆರಳಿ ಎಂಬ ಎಷ್ಟೇ ತಿಳುವಳಿಕೆ | |

| | | | | | | |
|---|---|---|---|---|---|---|
| | | | | | ನೀಡಿದರೂ ಕೇಳದೆ ಮಧ್ಯಾಹ್ನ 12-30 ಗಂಟೆವರೆಗೆ ಅಕ್ರಮ ರಸ್ತೆ ತಡೆ ಉಂಟುಮಾಡಿ ಸಾರ್ವಜನಿಕರ ಜನ ಜೀವನ ಅಸ್ತವ್ಯಸ್ತ ಉಂಟಾಗುವಂತೆ ಮಾಡಿರುತ್ತಾರೆ. ರೀತಿ ಅಕ್ರಮ ರಸ್ತೆ ತಡೆ ಮಾಡಿರುವುದು ಅಪರಾಧವಾದ್ದರಿಂದ ಸದರಿಯವರುಗಳ ಮೇಲೆ ಸ್ವಯಂ ಪ್ರಕರಣ ದಾಖಲಿಸಿರುತ್ತದೆ. | |
| 10 | ಪಶ್ಚಿಮ ಪೊಲೀಸ್ ಠಾಣೆ | 275/10 ಕಲಂ 143. 427, ರೆ/ವಿ 149 ಐಪಿಸಿ | ಸಹಾಯಕ ಇಂಜಿನಿಯರ್ ವಿ. ಕಾರ್ಯ ಮತ್ತು ಪಾಲನೆ ಘಟಕ-1, ಸೆಸ್ಕಾಂ, ಮಂಡ್ಯ | ಸುಮಾರು 10 ರಿಂದ 15 ಜನ ಕಾವೇರಿ ಚಳವಳಿಯ ಪ್ರತಿಭಟನಾಕಾರರು | ದಿನಾಂಕ: 06.10.2012 ರಂದು ಬೆಳಿಗ್ಗೆ 10-00 ಗಂಟೆಯಲ್ಲಿ ಮಂಡ್ಯದಲ್ಲಿ ಕಾವೇರಿ ನೀರಿಗಾಗಿ ಚಳವಳಿ ನಡೆಸುವ ವೇಳೆಯಲ್ಲಿ ಸಂಜಯ ವೃತ್ತದಿಂದ ವಿಶ್ವೇಶ್ವರಯ್ಯ ಪ್ರತಿಮೆ ಕಡೆಗೆ ಹೋಗುವ | ಸಿಸಿ ನಂ. 600/13 ರಲ್ಲಿ ಘನ ನ್ಯಾಯಾಲಯದ ವಿಚಾರಣೆಯಲ್ಲಿರುತ್ತೆ |

| | | | | | | |
|---|---|---|---|---|---|---|
| | | | | | ಚಳವಳಿಗಾರರು ಇವರಲ್ಲಿ ಕೆಲವರು ಸುಮಾರು 10 ರಿಂದ 15 ಜನರು ಪಿರ್ಯಾದಿಯವರ ಸೆಸ್ಕಾಂ ಕಛೇರಿ ಬಳಿಗೆ ಬಂದು ಹೊರಗಿನಿಂದ ಕಛೇರಿಯ ಕಿಟಕಿಯ ಮೇಲೆ ಕಲ್ಲು ತೂರಿ ಗಾಜನ್ನು ಪುಡಿ ಮಾಡಿ ಜಖಂ ಮಾಡಿರುತ್ತಾರೆ. ಇದರಿಂದ ಸಂಸ್ಥೆಗೆ ಸುಮಾರು 1000–00 ರೂ. ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಸದರಿ ಚಳವಳಿಗಾರರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಬೇಕೆಂದು ಇತ್ಯಾದಿಯಾಗಿ ನೀಡಿದ ದೂರು. | |
| 11 | ಕೆ. ಆರ್. ಸಾಗರ್ ಪೊಲೀಸ್ ಠಾಣೆ | ಮೊ. ನಂ. 154/2012 ಕಲಂ: 143, 353, 324, ರೆವಿ 149 ಐಪಿಸಿ | ಯು. ಟಿ. ನಾಯ್ಕ ಬಿನ್ ಟಿ. ವಿ. ನಾಯ್ಕ ಹೆಚ್. ಸಿ. 78, 1ನೇ ಪಡೆ, | 1) ಗಣಿಗ ರವಿಕುಮಾರ @ ಬಿ. ರವಿಕುಮಾರ್ ಬಿನ್ ಎಲ್. ಪುಟ್ಟಸ್ವಾಮಿ ಒಕ್ಕಲಿಗರು, ಸಮಾಜ ಸೇವಕ, | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾವೇರಿ ನದಿ ನೀರಿನ ವಿಚಾರದಲ್ಲಿ ದೆಹಲಿಯಲ್ಲಿ ಪ್ರಧಾನ | ಸಿ.ಸಿ. ನಂ. 58/13 ರಲ್ಲಿ ದಿನಾಂಕ: 21.07.14 ರಂದು ವಿಚಾರಣೆಯಲ್ಲಿದೆ |

| | | | | | | |
|---|---|---|---|---|---|---|
| | | | ಕೆ.ಎಸ್.ಆರ್.ಪಿ. ಬೆಂಗಳೂರು | ಗಣಿಗ ಗ್ರಾಮ, ಮಂಡ್ಯ ತಾಲ್ಲೂಕು<br>2) ಅಶೋಕ ಜಯರಾಂ ಬಿನ್ ಲೇಟ್, ಎಸ್.ಡಿ. ಜಯರಾಮ್, 30 ವರ್ಷ, ಜೆ.ಡಿ.ಎಸ್. ಕಾರ್ಯಕರ್ತರು 2ನೇ ಕ್ರಾಸ್, ನೆಹರು ನಗರ, ಜಿಲ್ಲಾ ಆಸ್ಪತ್ರೆ ಹಿಂಭಾಗ ಮಂಡ್ಯ<br>3) ಶಂಕರೆಗೌಡ ಬಿನ್ ತಮ್ಮಮ್ಮಯ 45 ವರ್ಷ ಒಕ್ಕಲಿಗರು, ಜೈ ಕರ್ನಾಟಕ ಮಂಡ್ಯ ತಾಲ್ಲೂಕು ಅಧ್ಯಕ್ಷರು, ಕಾಮದೇನು ಹೋಟೇಲ್ ಮಾಲೀಕರು 3ನೇ ಕ್ರಾಸ್ ಗಾಂಧಿನಗರ ಮಂಡ್ಯ.<br>4) ಎಸ್. ನಾರಾಯಣ ಬಿನ್ ಶಿವಲಿಂಗಯ್ಯ 33 ವರ್ಷ, ಒಕ್ಕಲಿಗರು, ನಂ. 3404 ವಿಜಯಲಕ್ಷ್ಮಿ ಕಾಂಪ್ಲೆಕ್ಸ್, ನೂರಡಿ ರಸ್ತೆ ಮಂಡ್ಯ ನಗರ.<br>5) ಉಮೇಶ್ ಬಿನ್ | ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ನದಿ ಪ್ರಾದಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕದಿಂದ ತಮಿಳುನಾಡಿಗೆ ದಿನಾಂಕ: 15.10.2012ರ ವರೆಗೆ ಪ್ರತಿ ದಿನ 9 ಸಾವಿರ ಕ್ಯೂಸೆಕ್ಸ್ ನೀರನ್ನು ಹರಿಸಬೇಕೆಂದು ಆದೇಶ ಮಾಡಿರುವುದನ್ನು ವಿರೋಧಿಸಿ ಮಂಡ್ಯ ಜಿಲ್ಲೆಯಾದ್ಯಂತ ಕಾವೇರಿ ಹಿತ ರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ರಾಜಕೀಯ ಪಕ್ಷಗಳು ಹಾಗೂ ಅನೇಕ ಸಂಘಟನೆಗಳು ಹಮ್ಮಿಕೊಂಡಿರುವ ಪ್ರತಿಭಟನೆಯು ಸಂಬಂಧ ದಿನಾಂಕ: 03.10.12 ರಂದು ಕೆ. ಆರ್. ಸಾಗರ ಆಣೆಕಟ್ಟೆಗೆ ಕಾವೇರಿ ಹಿತ ರಕ್ಷಣಾ ಸಮಿತಿಯವರು | |

| | | | | | | |
|---|---|---|---|---|---|---|
| | | | | ಸಿದ್ದಯ್ಯ, 35 ವರ್ಷ, ಗೆಜ್ಜಲಗೆರೆ ಗ್ರಾಮ ಮದ್ದೂರು ತಾಲ್ಲೂಕು<br>6) ಹೆಚ್.ಡಿ. ಜಯರಾಂ ಬಿನ್ ಡಿ.ಎಂ. ದೇವಯ್ಯ ಸುಮಾರು 52 ವರ್ಷ, ಕರವೇ ಪ್ರವೀಣ ಶೆಟ್ಟಿ ಬಣ, ಬೂತನಹೊಸೂರು ಮಂಡ್ಯ ಜಿಲ್ಲೆ<br>7)ಕೆ.ಟಿ. ಹನುಮೇಶ ಬಿನ್ ತಿಮ್ಮೇಗೌಡ ಒಕ್ಕಲಿಗರು, ವ್ಯಾಪಾರ, ಮಂಡ್ಯ ತಾಲ್ಲೂಕು ಕನ್ನಡಸೇನೆ ಯುವ ಅಧ್ಯಕ್ಷರು, ಕಿರಗುದೂರು<br>8) ಸುಜೀತ್‌ಕುಮಾರ್ ಬಿನ್ ತಿಮ್ಮೇಗೌಡ 33 ವರ್ಷ, ಕರ್ನಾಟಕ ಕನ್ನಡ ಸೇನೆ ಮಂಡ್ಯನಗರ ಉಪಾಧ್ಯಕ್ಷರು & ವ್ಯಾಪಾರ, ಕುವೆಂಪುನಗರ ಮಂಡ್ಯ<br>9) ಹರೀಶ್ ಬಿನ್ ಚಿಕ್ಕಲಿಂಗೇಗೌಡ 36 ವರ್ಷ, | ಮುತ್ತಿಗೆ ಬಂದೋಬಸ್ತ್ ಕರ್ತವ್ಯಕ್ಕೆ ಬಂದಿದ್ದು, ಪಿರ್ಯಾದಿಯವರು ಬಂದೋಬಸ್ತ್ ಕರ್ತವ್ಯದಲ್ಲಿ ಇದ್ದಾಗ ಆರೋಪಿಗಳಾದ 1) ಗಾಣಿಗ ರವಿಕುಮಾರ 2) ಅಶೋಕ ಜಯರಾಮ್, 3) ನೂರಾರು ರಕ್ಷಣಾ ವೇದಿಕೆಯ ಕಾರ್ಯಕರ್ತರು ಗೋಷಣೆಗಳನ್ನು ಕೂಗುತ್ತಾ ಅಣೆಕಟ್ಟು ಕಡೆಗೆ ಮುನ್ನುಗ್ಗಲು ಪ್ರಯತ್ನಿಸಿದಾಗ ತಡೆದಿದ್ದರಿಂದ ಆರೋಪಿಗಳು ಕಲ್ಲು ತೂರಾಟ ಮಾಡಿದ್ದರಿಂದ ಪಿರ್ಯಾದಿಯ ಬಲಕೆನ್ನೆಗೆ ಬಿದ್ದು ನೋವುಂಟಾಗಿದ್ದು ಆರೋಪಿಗಳು ಸರ್ಕಾರಿ ಕೆಲಸಕ್ಕೆ ಅಡ್ಡಿ | |

| | | | | | | |
|---|---|---|---|---|---|---|
| | | | | ಒಕ್ಕಲಿಗರು, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು.<br>10) ಜಿ.ಪಿ.ಮೋಹನಕುಮಾರ್ ಬಿನ್ ಪುಟ್ಟಸ್ವಾಮಿ 34 ವರ್ಷ, ಒಕ್ಕಲಿಗರು, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು<br>11) ಜಿ.ಇ.ಬಾಬು ಬಿನ್ ಈರಯ್ಯ, 36 ವರ್ಷ, ಒಕ್ಕಲಿಗರು ಗೆಜ್ಜಲಗೆರೆ, ಮದ್ದೂರು ತಾಲ್ಲೂಕು<br>12) ಜೆ. ಸಿ. ಕೃಷ್ಣ ಬಿನ್ ಹೊಂಬಿ ಚನ್ನಯ್ಯ, 44 ವರ್ಷ, ಒಕ್ಕಲಿಗರು, ಗಜ್ಜಲಗೆರೆ, ಮದ್ದೂರು ತಾಲ್ಲೂಕು<br>13) ಜೆ. ಸಿ. ಸುನಿಲ್ ಕುಮಾರ್ ಬಿನ್ ಚಿಕ್ಕಲಿಂಗೇಗೌಡ, 38 ವರ್ಷ, ಒಕ್ಕಲಿಗರು, ಗಜ್ಜಲಗೆರೆ, ಮದ್ದೂರು ತಾಲ್ಲೂಕು | ಪಡಿಸಿರುತ್ತಾರೆ ಇತ್ಯಾದಿ. | |

| | | | | | | |
|---|---|---|---|---|---|---|
| | | | | 14) ವೀರಪ್ಪ ಬಿನ್ ಸಿ. ವೀರಪ್ಪ, 48 ವರ್ಷ, ಒಕ್ಕಲಿಗರು, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು.<br>15) ಮಹದೇವ ಬಿನ್ ಗಂಟೆ ರಾಮಯ್ಯ, 34 ವರ್ಷ, ಒಕ್ಕಲಿಗರು, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು.<br>16) ಕೆ.ಟಿ.ಶಂಕರೇಗೌಡ ಬಿನ್ ಲೇಟ್ ತಮ್ಮಯ್ಯ, 45 ವರ್ಷ, ಜಯಕರ್ನಾಟಕ ಮಂಡ್ಯ ಜಿಲ್ಲಾಧ್ಯಕ್ಷರು, ಸ್ವಾತಿ ಬಾರ್ ಮಾಲೀಕರು, 3ನೇ ಕ್ರಾಸ್, ಗಾಂಧಿನಗರ ಮಂಡ್ಯ.<br>17) ಉಮಾಶಂಕರ ಬಿನ್ ಲೇಟ್ ಚನ್ನಪ್ಪ, 40 ವರ್ಷ, ಒಕ್ಕಲಿಗರು, ಕರವೇ ಜಿಲ್ಲಾಧ್ಯಕ್ಷರು, ವಳಗೆರೆಹಳ್ಳಿ ಮದ್ದೂರು ತಾಲ್ಲೂಕು<br>18) ಪುನೀತ್ ಗೌಡ ಬಿನ್ ಲೇಟ್ ಸಿದ್ಧರಾಮೇಗೌಡ, 25 ವರ್ಷ, ಒಕ್ಕಲಿಗರು, | | |

| | | | | | | |
|---|---|---|---|---|---|---|
| | | | | ಕರವೇಕಾರ್ಯಕರ್ತ, ತಗ್ಗಹಳ್ಳಿ ಗ್ರಾಮ, ಮಂಡ್ಯ ತಾಲ್ಲೂಕು<br>19) ಚಿರಂಜಿವಿ ಬಿನ್ ಶಿವಲಿಂಗೇಗೌಡ, 38 ವರ್ಷ, ಒಕ್ಕಲಿಗರು, ಕರವೇ ಕಾರ್ಯಕರ್ತ, ಅರ್ಕೇಶ್ವರ ನಗರ, ಗುತ್ತಲು ಮಂಡ್ಯ ಸಿಟಿ.<br>20) ರಾಜು ಬಿನ್ ಮಹದೇವ, 28 ವರ್ಷ, ಮಡಿವಾಳ, ಕರವೇ ಕಾರ್ಯಕರ್ತ, 2ನೇ ಕ್ರಾಸ್, ಲೀಲಾವತಿ ಬಡಾವಣೆ ಮದ್ದೂರು<br>21) ರಾಜು ಬಿನ್ ಮಹದೇವ 30 ವರ್ಷ, ಮಡಿವಾಳಶೆಟ್ಟರು, ಅಟೋಚಾಲಕ, ಕರವೇ ಕಾರ್ಯಕರ್ತ, 3ನೇ ಕ್ರಾಸ್, ಅಶೋಕನಗರ ವಿ.ವಿ.ರೋಡ್, ಮಂಡ್ಯ. | | |
| 12 | ಕೆ. ಆರ್. | ಮೊ.ನಂ. | ದಾವಲ್ ಸಾಬ | 1) ಗಣಿಗ ರವಿಕುಮಾರ @ | ಮಾನ್ಯ ಸರ್ವೋಚ್ಚ | ಸಿಸಿ ನಂ. 59/13 ರಲ್ಲಿ |

| | | | | | | |
|---|---|---|---|---|---|---|
| | ಸಾಗರ ಪೊಲೀಸ್ ಠಾಣೆ | 155/2012 ಕಲಂ 143, 353, 427, ರೆವಿ 149 ಐಪಿಸಿ & 2(ಎ)&(ಬಿ) ಕರ್ನಾಟಕ ಪ್ರಿವೆನ್ಸಸ್ ಆಫ್ ಡಿಸ್ಟ್ರಕ್ಷನ್ & ಲಾಸ್ ಆಫ್ ಪ್ರಾಪರ್ಟಿ ಆಕ್ಟ್ | ಬಿನ್ ರೆಹಮಾನ್ ಸಾಬ್, ಆರ್.ಎಸ್.ಐ. 8ನೇ ಪಡೆ ಕೆ.ಎಸ್.ಆರ್.ಪಿ ಶಿವಮೊಗ್ಗ | ಬಿ. ರವಿಕುಮಾರ ಬಿನ್ ಎಲ್. ಪುಟ್ಟಸ್ವಾಮಿ, ಒಕ್ಕಲಿಗರು, ಸಮಾಜಸೇವಕ, ಗಣಿಗಗ್ರಾಮ, ಮಂಡ್ಯ ತಾಲ್ಲೂಕು<br>2) ಅಶೋಕ ಜಯರಾಂ ಬಿನ್ ಲೇಟ್, ಎಸ್.ಡಿ. ಜಯರಾಮ್, 30 ವರ್ಷ, ಜೆ.ಡಿ.ಎಸ್. ಕಾರ್ಯಕರ್ತರು, 2ನೇ ಕ್ರಾಸ್, ನೇಹರು ನಗರ, ಜಿಲ್ಲಾ ಆಸ್ಪತ್ರೆ ಹಿಂಭಾಗ ಮಂಡ್ಯ ಸಿಟಿ.<br>3) ನಾಗರಾಜು ಬಿನ್ ಕೆಂಪೇಗೌಡ, 40 ವರ್ಷ, ಒಕ್ಕಲಿಗರು, ಡಣಾಯಕನಪುರ, ಮಂಡ್ಯ ತಾಲ್ಲೂಕು<br>4) ಕೆಂಪರಾಜು ಬಿನ್ ಬಸವರಾಜು, 35 ವರ್ಷ, ಒಕ್ಕಲಿಗರು, ವ್ಯವಸಾಯ, ಆಲಕೆರೆ ಗ್ರಾಮ, ಮಂಡ್ಯ ತಾಲ್ಲೂಕು<br>5)ಕೃಷ್ಣ ಬಿನ್ ಬೋರಯ್ಯ, | ನ್ಯಾಯಾಲಯವು ಕಾವೇರಿ ನದಿ ನೀರಿನ ವಿಚಾರದಲ್ಲಿ ದೆಹಲಿಯಲ್ಲಿ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ನದಿ ಪ್ರಾದಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕದಿಂದ ತಮಿಳುನಾಡಿಗೆ ದಿನಾಂಕ: 15.10.2012 ರವರೆಗೆ ಪ್ರತಿ ದಿನ ಸಾವಿರ ಕ್ಯೂಸೆಕ್ಸ್ ನೀರನ್ನು ಹರಿಸಬೇಕೆಂದು ಆದೇಶ ಮಾಡಿರುವುದನ್ನು ವಿರೋಧಿಸಿ ಮಂಡ್ಯ ಜಿಲ್ಲೆಯಾದ್ಯಂತ ಕಾವೇರಿ ಹಿತ ರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ರಾಜಕೀಯ ಪಕ್ಷಗಳು ಹಾಗೂ ಅನೇಕ ಸಂಘಟನೆಗಳು ಹಮ್ಮಿಕೊಂಡಿರುವ ಪ್ರತಿಭಟನೆಯ ಸಂಬಂಧ ದಿನಾಂಕ: 03.10.12 | ದಿನಾಂಕ: 21.08.14 ರಂದು ವಿಚಾರಣೆಯಲ್ಲಿದೆ |

| | | | | | | |
|---|---|---|---|---|---|---|
| | | | | 45 ವರ್ಷ, ಪ.ಜಾ. ಈಚಗೆರೆ ಗ್ರಾಮ ಮಂಡ್ಯ ತಾಲ್ಲೂಕು.<br>6) ತುಳಸಿದಾಸ್ ಬಿನ್ ಕೆ.ಟಿ.ಗೋವಿಂದೇಗೌಡ, 35 ವರ್ಷ, ಒಕ್ಕಲಿಗರು, ಜಯಕರ್ನಾಟಕ ಸಂಘದ ಕಾರ್ಯಕರ್ತ, ಕ್ಯಾತನಹಳ್ಳಿ, ಪಾಂಡವಪುರ ತಾಲ್ಲೂಕು<br>7) ನಾರಾಯಣ ಬಿನ್ ಶಿವಲಿಲಂಗಯ್ಯ, 30 ವರ್ಷ, ಒಕ್ಕಲಿಗರು, 5ನೇ ಕ್ರಾಸ್, ಕಾವೇರಿ ನಗರ ಮಂಡ್ಯ ಸಿಟಿ<br>8) ಸಿದ್ದರಾಜು ಬಿನ್ ಸಿದ್ದಪ್ಪ, 40 ವರ್ಷ, ಒಕ್ಕಲಿಗರು, ಮಹದೇಶ್ವರ ದೇವಸ್ಥಾನ ರಸ್ತೆ, 7ನೇ ಕ್ರಾಸ್, ಜಾಲಹಳ್ಳಿ ಬಡಾವಣೆ, ಮಂಡ್ಯ<br>9) ಉಮಾಶಂಕರ ಬಿನ್ ಲೇಟ್ ಚನ್ನಪ್ಪ, 40 ವರ್ಷ, ಒಕ್ಕಲಿಗರು, ಕರವೇ ಜಿಲ್ಲಾಧ್ಯಕ್ಷರು, ವಳಗೆರೆಹಳ್ಳಿ | ರಂದು ಕೆ. ಆರ್. ಸಾಗರ ಅಣೆಕಟ್ಟೆಗೆ ಕಾವೇರಿ ಹಿತ ರಕ್ಷಣಾ ಸಮಿತಿಯವರು ಮುತ್ತಿಗೆ ಬಂದೋಬಸ್ತ್ ಕರ್ತವ್ಯಕ್ಕೆ ಬಂದಿದ್ದು, ಬಂದೋಬಸ್ತ್ ಕರ್ತವ್ಯದಲ್ಲಿ ಇದ್ದಾಗ ಆರೋಪಿಗಳಾದ 1) ಗಾಣಿಗ ರವಿಕುಮಾರ್ 2) ಅಶೋಕ ಜಯರಾಮ್ 3) ನೂರಾರು ರಕ್ಷಣಾ ವೇದಿಕೆಯ ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ಅಣೆಕಟ್ಟೆಕಡೆಗೆ ಮುನ್ನುಗ್ಗಲು ಪ್ರಯತ್ನಿಸಿದಾಗ ಕಲ್ಲು ತೂರಾಟಮಾಡಿದ್ದರಿಂದ ಕೆಎ–14ಜಿ–580 ರ ವಾಹನ ಜಕ್ಕಂಗೊಂಡಿರುತ್ತದೆ. ಆರೋಪಿಗಳು ಸರ್ಕಾರಿ ಕೆಲಸಕ್ಕೆ ಅಡ್ಡಿ | |

| | | | | | | |
|---|---|---|---|---|---|---|
| | | | | ಮದ್ದೂರು ತಾಲ್ಲೂಕು.<br>10) ಪುನೀತ್ ಗೌಡ ಬಿನ್ ಲೇಟ್ ಸಿದ್ದರಾಮೇಗೌಡ, 25 ವರ್ಷ, ಒಕ್ಕಲಿಗರು, ಕರವೇಕಾರ್ಯಕರ್ತ, ತಗ್ಗಹಳ್ಳಿ ಮಂಡ್ಯ ತಾಲ್ಲೂಕು<br>11) ಚಿರಂಜಿವಿ ಬಿನ್ ಶಿವಲಿಂಗೇಗೌಡ, 38 ವರ್ಷ, ಒಕ್ಕಲಿಗರು, ಕರವೇ ಕಾರ್ಯಕರ್ತ, ಅರ್ಕೇಶ್ವರನಗರ, ಗುತ್ತಲು ಮಂಡ್ಯ ಸಿಟಿ.<br>12) ರಾಜು ಬಿನ್ ಮಹದೇವ, 28 ವರ್ಷ, ಮಡಿವಾಳ, ಕರವೇ ಕಾರ್ಯಕರ್ತ, 2ನೇ ಕ್ರಾಸ್, ಲೀಲಾವತಿ ಬಡಾವಣೆ ಮದ್ದೂರು<br>13) ರಾಜು ಬಿನ್ ಮಹದೇವ 30 ವರ್ಷ ಮಡಿವಾಳಶೆಟ್ಟರು, ಅಟೋಚಾಲಕ, ಕರವೇ ಕಾರ್ಯಕರ್ತ, 3ನೇ ಕ್ರಾಸ್, | ಪಡಿಸಿರುತ್ತಾರೆ. | |

| | | | | | | |
|---|---|---|---|---|---|---|
| | | | | ಅಶೋಕನಗರ ವಿ.ವಿ.ರೋಡ್.<br>14) ಕೆ.ಎಂ. ಮಹದೇವಸ್ವಾಮಿ ಬಿನ್ ಮಾದೆಗೌಡ, 33 ವರ್ಷ, ಕುರುಬ ಜನಾಂಗ ಕನ್ನಡಸೇನೆ ಕಾರ್ಯಕರ್ತ, ವ್ಯಾಪರ 7ನೇ ಕ್ರಾಸ್, ಲೇಬರ್ ಕಾಲೋನಿ ಮಂಡ್ಯ ನಗರ.<br>15) ಶಿವಲಿಂಗಯ್ಯ ಬಿನ್ ಬಡ್ಡಿದೇವಯ್ಯ 40 ವರ್ಷ, ಕುರುಬರು, ವ್ಯಾಪರ ಕನ್ನಡ ಸೇನೆ ಕಾರ್ಯಕರ್ತ, 7ನೇ ಕ್ರಾಸ್, ಗುತ್ತಲು ಕಾಲೋನಿ, ಮಂಡ್ಯ ನಗರ.<br>16) ಕೃಷ್ಣಪ್ರಕಾಶ್ ಬಿನ್ ಲೇಟ್ ಬೈರೆಗೌಡ, ಬಿ. ಹೊಸಹಳ್ಳಿ ಗ್ರಾಮ ಮಂಡ್ಯ ತಾಲ್ಲೂಕು.<br>17) ಶಶಿ ವಕ್ಕಲಿಗರು, ಕಾಂಗ್ರೇಸ್ ಕಾರ್ಯಕರ್ತ, ಹನಕೆರೆ ಗ್ರಾಮ, ಮಂಡ್ಯ | | |

| | | | | | | |
|---|---|---|---|---|---|---|
| | | | | ತಾಲ್ಲೂಕು<br>18) ಡಿ. ಅಶೋಕ ಬಿನ್ ದಾಸೇಗೌಡ, 40 ವರ್ಷ, ಮಂಡ್ಯ ತಾಲ್ಲೂಕು ಕರವೇ ಅಧ್ಯಕ್ಷ, ಈಡಿಗರು, ಕಾವೇರಿ ನಗರ ಮಂಡ್ಯ.<br>19) ಡಿ.ಎನ್.ರವಿ ಬಿನ್ ನಾರಾಯಣಗೌಡ, 27 ವರ್ಷ, ಒಕ್ಕಲಿಗರು, ಕರವೇ ಕಾರ್ಯಕರ್ತ, ದೊಡ್ಡಬ್ಯಾಡರಹಳ್ಳಿ, ಪಾಂಡವಪುರ ತಾಲ್ಲೂಕು<br>20) ಹೆಚ್.ಆರ್.ಧನ್ಯಕುಮಾರ ಬಿನ್ ರಾಮೇಗೌಡ, 40 ವರ್ಷ, ಒಕ್ಕಲಿಗರು, ಪಾಂಡವಪುರ ತಾಲ್ಲೂಕು ಕರವೇ ಕಾರ್ಯದರ್ಶಿ, ವಾಸ: ಹಾರೋಹಳ್ಳಿ, ಪಾಂಡವಪುರ ತಾಲ್ಲೂಕು.<br>21) ಪಿ.ಎಸ್.ಜಗದೀಶ್ ಬಿನ್ ಸಿದ್ದೇಗೌಡ 35 ವರ್ಷ, ಒಕ್ಕಲಿಗರು, ತಾಲ್ಲೂಕು ಕರವೇ | | |

| | | | | | | |
|---|---|---|---|---|---|---|
| | | | | ಗೌರವಾಧ್ಯಕ್ಷರು, ವಾಸ: ಪಾಂಡವಪುರ<br>22) ಗೋವಿಂದಯ್ಯ ಬಿನ್ ಲೇಟ್ ಕೆಂಪೇಗೌಡ, 48 ವರ್ಷ, ಒಕ್ಕಲಿಗರು, ಕರವೇ ಕಾರ್ಯಕರ್ತ, ಚಿನಕುರಳಿಗ್ರಾಮ, ಪಾಂಡವಪುರ ತಾಲ್ಲೂಕು | | |
| 13 | ಕೆ.ಆರ್.ಸಾಗರ ಪೊಲೀಸ್ ಠಾಣೆ | ಮೊ.ನಂ.156/2012 ಕಲಂ: 143, 353, 324, 427 ಕೂಡ 149 ಐ.ಪಿ.ಸಿ. | ಅಮಾನುಲ್ಲಾ ಶರೀಫ್ ಆರ್. ಎ.ಪಿ.ಸಿ.–54 ಡಿ.ಎ.ಆರ್. ಮಂಡ್ಯ ಜಿಲ್ಲೆ. ಮಂಡ್ಯ ಮೊ.ನಂ. 9743851432 | 1) ಚಿದಂಬರ್ ಬಿನ್ ಸೋಮಣ್ಣ @ ಸೋಮೇಗೌಡ, 47 ವರ್ಷ, ಮಾಜಿ ಕರವೇ ಜಿಲ್ಲಾಧ್ಯಕ್ಷರು ಮಂಡ್ಯ ನಗರ<br>2) ಟಿ. ಎಸ್. ಸತ್ಯಾನಂದ ಬಿನ್ ಸ್ವಾಮಿ, 42 ವರ್ಷ, ಒಕ್ಕಲಿಗರು, ವಕೀಲರು, 9ನೇ ಕ್ರಾಸ್ ಚಾಮುಂಡೇಶ್ವರಿನಗರ, ಮಂಡ್ಯ ಸಿಟಿ, ಸ್ವಂತ ಸ್ಥಳ ತೈಲೂರು ಗ್ರಾಮ, ಮದ್ದೂರು ತಾಲ್ಲೂಕು<br>3) ಬಿ. ರವಿಕುಮಾರ್ ಬಿನ್ | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾವೇರಿ ನದಿ ನೀರಿನ ವಿಚಾರದಲ್ಲಿ ದೆಹಲಿಯಲ್ಲಿ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ನದಿ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕದಿಂದ ತಮಿಳುನಾಡಿಗೆ ದಿನಾಂಕ: 15.10.2012 ರವರೆಗೆ ಪ್ರತಿ ದಿನ ಸಾವಿರ ಕ್ಯೂಸೆಕ್ಸ ನೀರನ್ನು ಹರಿಸಬೇಕೆಂದು ಆದೇಶ ಮಾಡಿರುವುದನ್ನು | ಸಿಸಿ ನಂ. 104/13 ರಲ್ಲಿ ದಿನಾಂಕ: 21.07.14 ರಂದು ವಿಚಾರಣೆಯಲ್ಲಿದೆ |

| | | | | | | |
|---|---|---|---|---|---|---|
| | | | | ಎಲ್.ಪುಟ್ಟಸ್ವಾಮಿ, ಒಕ್ಕಲಿಗರು, ಸಮಾಜ ಸೇವಕ, ಗಣಿಗ ಗ್ರಾಮ ಮಂಡ್ಯ ತಾಲ್ಲೂಕು<br>4) ಅಶೋಕ ಜಯರಾಂ ಬಿನ್ ಲೇಟ್, ಎಸ್.ಡಿ. ಜಯರಾಮ್, 30 ವರ್ಷ, ಜೆ.ಡಿಎಸ್. ಕಾರ್ಯಕರ್ತರು, 2ನೇ ಕ್ರಾಸ್, ನೆಹರು ನಗರ, ಜಿಲ್ಲಾ ಆಸ್ಪತ್ರೆ ಹಿಂಭಾಗ ಮಂಡ್ಯ ಸಿಟಿ.<br>5) ಡಿ. ಅಶೋಕ ಬಿನ್ ದಾಸೇಗೌಡ, 40 ವರ್ಷ, ಮಂಡ್ಯ ತಾಲ್ಲುಕು ಕರವೇ ಅಧ್ಯಕ್ಷ, ಈಡಿಗರು, ಕಾವೇರಿನಗರ ಮಂಡ್ಯ.<br>6) ಡಿ.ಎನ್. ರವಿ ಬಿನ್ ನಾರಾಯಣಗೌಡ, 27 ವಷ್, ಒಕ್ಕಲಿಗರು, ಕರವೇ ಕಾರ್ಯಕರ್ತ, ದೊಡ್ಡ ಬ್ಯಾಡರಹಳ್ಳಿ, ಪಾಂಡವಪುರ ತಾಲ್ಲೂಕು.<br>7) ಹೆಚ್.ಆರ್.ಧನ್ಯಕುಮಾರ | ವಿರೋಧಿಸಿ ಮಂಡ್ಯ ಜಿಲ್ಲೆಯಾದ್ಯಂತ ಕಾವೇರಿ ಹಿತ ರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ರಾಜಕೀಯ ಪಕ್ಷಗಳು ಹಾಗೂ ಅನೇಕ ಸಂಘಟನೆಗಳು ಹಮ್ಮಿಕೊಂಡಿರುವ ಪ್ರತಿಭಟನೆಯ ಸಂಬಂಧ ದಿನಾಂಕ: 03.10.12 ಕಾವೇರಿ ಹಿತ ರಕ್ಷಣಾ ಸಮಿತಿ ಅಧ್ಯಕ್ಷರಾದ ಶ್ರೀ ಜಿ. ಮಾದೇಗೌಡರ ನೇತೃತ್ವದಲ್ಲಿ ಮುತ್ತಿಗೆ ಕಾರ್ಯಕ್ರಮದ ಬಂದೊಬಸ್ತ್ ಕರ್ತವ್ಯದಲ್ಲಿ ಕೆ.ಆರ್.ಸಾಗರದ ಟಿ–ಜಂಕ್ಷನ್ ಬಳಿ ರಕ್ಷಣೆಗೆಂದು ಹಾಕಿದ್ದ ತಂತಿಬೇಲಿ ಹತ್ತಿರ ನಾನು ಕರ್ತವ್ಯದಲ್ಲಿದ್ದಾಗ ಆರೋಪಿಗಳಾದ ಚಿದಂಬರ್, ಸತ್ಯಾನಂದ, ಗಣಿಗ ರವಿಕುಮಾರ್, | |

| | | | | | | |
|---|---|---|---|---|---|---|
| | | | | ಬಿನ್ ರಾಮೇಗೌಡ, 40 ವರ್ಷ, ಒಕ್ಕಲಿಗರು, ಪಾಂಡವಪುರ ತಾಲ್ಲೂಕು ಕರವೇ ಕಾರ್ಯದರ್ಶಿ, ವಾಸ: ಹಾರೋಹಳ್ಳಿ, ಪಾಂಡವಪುರ ತಾಲ್ಲೂಕು<br>8) ಪಿ.ಎಸ್.ಜಗದೀಶ ಬಿನ್ ಸಿದ್ದೇಗೌಡ, 35 ವರ್ಷ, ಒಕ್ಕಲಿಗರು, ತಾಲ್ಲೂಕು ಕರವೇ ಗೌರವಾಧ್ಯಕ್ಷರು, ವಾಸ: ಪಾಂಡವಪುರ<br>9) ಗೋವಿಂದಯ್ಯ ಬಿನ್ ಲೇಟ್ ಕೆಂಪೇಗೌಡ, 48 ವರ್ಷ, ಒಕ್ಕಲಿಗರು, ಕರವೇ ಕಾರ್ಯಕರ್ತ, ಚಿನಕುರಳಿ ಗ್ರಾಮ, ಪಾಂಡವಪುರ ತಾಲ್ಲೂಕು.<br>10) ಶಂಕರ್ ಬಿನ್ ಸಿದ್ದೇಗೌಡ, 34 ವರ್ಷ, ಒಕ್ಕಲಿಗರು, ಗೆಜ್ಜಲಗೆರೆ ಗ್ರಾಮ ಮದ್ದೂರು ತಾಲ್ಲೂಕು<br>11) ಬೋರ @ ಬೋಕಪ್ಪ | ಅಶೋಕ ಜಯರಾಮ ಹಾಗೂ ನೂರಾರು ರಕ್ಷಣಾವೇದಿಕೆಯ ಕಾರ್ಯಕರ್ತರುಗಳು ತಂತಿ ಬೇಲಿಯನ್ನು ಮುರಿದು ಒಳನುಗ್ಗಲು ಮುಂದಾದಾಗ ತಡೆಯಲು ಪ್ರಯತ್ನಿಸಿದಾಗ ಆರೋಪಿಗಳು ತಂತಿಬೇಲಿಯನ್ನು ಕಿತ್ತು ಮೈಮೇಲ್ ಹಾಕಿದ್ದರಿಂದ ಬಲಗೈಗೆ, ಎಡಗೈ ಹಾಗೂ ಕಾಲುಗಳಿಗೆ ಎಟಾಗಿರುತ್ತೆ. | |

| | | | | | | |
|---|---|---|---|---|---|---|
| | | | | ಬಿನ್ ನಿಂಗೆಗೌಡ, ಬಸ್‌ಕ್ಲೀನರ್ ಕೆಲಸ, ಮಲ್ಲನಾಯಕನಕಟ್ಟೆ ಗ್ರಾಮ, ಮಂಡ್ಯ ತಾಲ್ಲೂಕು<br>12) ಕೆಂಪಯ್ಯ @ ಆನಸೋಲು ಕೆಂಪಯ್ಯ ವಕ್ಕಲಿಗರು, ವ್ಯವಸಾಯ, 48 ವರ್ಷ, ಚಾಮುಂಡೇಶ್ವರಿ ನಗರ ಮಂಡ್ಯ ನಗರ<br>13) ಸಿ.ಎಂ.ದ್ಯಾವಪ್ಪ ವಕ್ಕಲಿಗರು, ಕಾಂಗ್ರೇಸ್ ಕಾರ್ಯಕರ್ತ, ಚಿಕ್ಕಬಳ್ಳಿ ಗ್ರಾಮ ಮಂಡ್ಯ ತಾಲ್ಲೂಕು<br>14) ನಾಗರಾಜ @ ಸ್ಟಾಟ್‌ನಾಗ ಬಿನ್ ನಿಂಗಣ್ಣ ವಕ್ಕಲಿಗರು, ವ್ಯವಸಾಯ, ಹೈಸ್ಕೂಲ್‌ಪಕ್ಕ ಗೊರವಾಲೆ ಗ್ರಾಮ ಮಂಡ್ಯ ತಾ:<br>15) ಬೇಕರಿ ರಮೇಶ್ ಮಂಡ್ಯ ಜಿಲ್ಲಾ ಕದಂಬ ಸೇನೆ ಅಧ್ಯಕ್ಷ ಮಂಡ್ಯ | | |

| | | | | | | |
|---|---|---|---|---|---|---|
| | | | | 16) ಲೋಕಿ @ ಲೋಕೇಶ್ ಕಲ್ಮಂಟಗ್ರಾಮ ಕೆರೆಗೋಡು ಹೋಬಳಿ ಮಂಡ್ಯ ತಾಲ್ಲೂಕು<br>17) ಕುಮಾರ್ ಬಿನ್ ಸ್ವಾಮಿ @ ಏಳ ನೀರುಸ್ವಾಮಿ @ ಮೂರುಕಿವಿ ಸ್ವಮಿ, 28 ವರ್ಷ, ಒಕ್ಕಲಿಗರು, ವ್ಯವಸಾಯ, ಹಳೆಬೀದಿ ಡಾ॥ ಸೋಮಶೇಖರ್ ಹಳೆಮನೆ ಬಳಿ ಕ್ಯಾತನಹಳ್ಳಿ ಗ್ರಾಮ ಪಾಂಡವಪುರ ತಾಲ್ಲೂಕು<br>18) ರವಿ ಬಿನ್ ರಾಮೇಗೌಡ, 28 ವರ್ಷ, ಒಕ್ಕಲಿಗರು, ಡಾಮಡಹಳ್ಳಿ ಗ್ರಾಮ ಪಾಂಡವಪುರ ತಾಲ್ಲೂಕು<br>19) ಶಂಕರೇಗೌಡ ಬಿನ್ ತಮ್ಮಯ್ಯ 45 ವರ್ಷ, ಒಕ್ಕಲಿಗರು, ಜೈಕರ್ನಾಟಕ ಮಂಡ್ಯ ತಾಲ್ಲೂಕು ಅಧ್ಯಕ್ಷರು, ಕಾಮದೇನು ಹೋಟೇಲ್ ಮಾಲೀಕರು 3ನೇ ಕ್ರಾಸ್ ಗಾಂಧಿನಗರ ಮಂಡ್ಯ | | |

| | | | | | | |
|---|---|---|---|---|---|---|
| | | | | 20) ಹೆಚ್.ಡಿ. ಜಯರಾಂ ಬಿನ್ ಡಿ.ಎಂ.ದೇವಯ್ಯ. ಸುಮಾರು 52 ವರ್ಷ, ಕರವೇ ಪ್ರವೀಣ ಶೆಟ್ಟಿ ಬಣ, ಬೂತನ ಹೊಸೂರು, ಮಂಡ್ಯ ಜಿಲ್ಲೆ<br>21) ಕೆ.ಟಿ. ಹನುಮೇಶ ಬಿನ್ ತಿಮ್ಮೇಗೌಡ ಒಕ್ಕಲಿಗರು, ವ್ಯಾಪಾರ ಮಂಡ್ಯ ತಾಲ್ಲೂಕು ಕನ್ನಡಸೇನೆ ಯುವ ಅಧ್ಯಕ್ಷರು, ಕಿರಗಂದೂರು<br>22) ಸುಜಿತ್‌ಕುಮಾರ್ ಬಿನ್ ತಿಮ್ಮೆಗೌಡ 33 ವರ್ಷ, ಕರ್ನಾಟಕ ಕನ್ನಡ ಸೇನೆ ಮಂಡ್ಯ ನಗರ ಉಪಾಧ್ಯಕ್ಷರು, ಮತ್ತು ವ್ಯಾಪಾರ ಕುವೆಂಪುನಗರ ಮಂಡ್ಯ ನಗರ | | |
| 14 | ಕೆ.ಆರ್.ಸಾಗರ ಪೊಲೀಸ್ ಠಾಣೆ | ಮೊ.ನಂ. 157/2012 ಕಲಂ: 143, 353, 324, 427 ಕೂಡ 149 | ಶಿವಕುಮಾರ್ ಪಿ.ಸಿ. 025030846105 ಬಟಾಲಿಯನ್ ಆರ್.ಎ.ಎಫ್. | 1) ಚಿದಂಬರ್ ಬಿನ್ ಸೋಮಣ್ಣ @ ಸೊಮೇಗೌಡ, 47 ವರ್ಷ, ಮಾಜಿ ಕರವೇ ಜಿಲ್ಲಾಧ್ಯಕ್ಷರು, ವಾಸ: 4 | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾವೇರಿ ನದಿ ನೀರಿನ ವಿಚಾರದಲ್ಲಿ ದೆಹಲಿಯಲ್ಲಿ ಪ್ರಧಾನ ಮಂತ್ರಿಯವರ | ಸಿಸಿ ನಂ. 105/13 ರಲ್ಲಿ ದಿನಾಂಕ: 21.07.14 ರಂದು ವಿಚಾರಣೆಯಲ್ಲಿದೆ. |

| | | | | | | |
|---|---|---|---|---|---|---|
| | | ಐ.ಪಿ.ಸಿ. | ಕೊಯಮತ್ತೂರು ತಮಿಳುನಾಡು ಪೋನ್ ನಂ. 09585622082 | ಮಂಡ್ಯ ನಗರ 2) ಟಿ.ಎಸ್.ಸತ್ಯಾನಂದ ಬಿನ್ ಸ್ವಾಮಿ, 42 ವರ್ಷ, ಒಕ್ಕಲಿಗರು, ವಕೀಲರು, 9ನೇ ಕ್ರಾಸ್ ಚಾಮುಂಡೇಶ್ವರಿನಗರ, ಮಂಡ್ಯ ಸಿಟಿ ಸ್ವಂತ ಸ್ಥಳ ತೈಲೂರು ಗ್ರಾಮ, ಮದ್ದೂರು ತಾಲ್ಲೂಕು 3) ಗಣಿಗ ರವಿಕುಮಾರ @ ಬಿ. ರವಿಕುಮಾರ್ ಬಿನ್ ಎಲ್. ಪುಟ್ಟಸ್ವಾಮಿ, ಒಕ್ಕಲಿಗರು, ಸಮಾಜ ಸೇವಕ, ಗಣಿಗ ಗ್ರಾಮ, ಮಂಡ್ಯ ತಾಲ್ಲೂಕು. 4) ಅಶೋಕ ಜಯರಾಂ ಬಿನ್ ಲೇಟ್, ಎಸ್. ಡಿ. ಜಯರಾಮ್, 30 ವರ್ಷ, ಜೆಡಿಎಸ್ ಕಾರ್ಯಕರ್ತರು, 2ನೇ ಕ್ರಾಸ್, ನೆಹರು ನಗರ, ಜಿಲ್ಲಾ ಆಸ್ಪತ್ರೆ ಹಿಂಭಾಗ ಮಂಡ್ಯ ಸಿಟಿ 5) ಗಿರೀಶ್ ಬಿನ್ ಪಟೇಲ್, | ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ನದಿ ಪ್ರಾದಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕದಿಂದ ತಮಿಳುನಾಡಿಗೆ ದಿನಾಂಕ: 15.10.2012 ರವರೆಗೆ ಪ್ರತಿ ದಿನ 9 ಸಾವಿರ ಕ್ಯೂಸೆಕ್ಸ ನೀರನ್ನು ಹರಿಸಬೇಕೆಂದು ಆದೇಶ ಮಾಡಿರುವುದನ್ನು ವಿರೋಧಿಸಿ ಮಂಡ್ಯ ಜಿಲ್ಲೆಯಾದ್ಯಂತ ಕಾವೇರಿ ಹಿತ ರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ರಾಜಕೀಯ ಪಕ್ಷಗಳು ಹಾಗೂ ಅನೇಕ ಸಂಘಟನೆಗಳು ಹಮ್ಮಿಕೊಂಡಿರುವ ಪ್ರತಿಭಟನೆಯ ಸಂಬಂಧ ದಿನಾಂಕ: 03.10.12 ರಂದು ಮಂಡ್ಯದಿಂದ ಕೆ. ಆರ್. ಸಾಗರ ಅಣೆಕಟ್ಟೆಯ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆಯಾಗಿದ್ದು | |

| | | | | | | |
|---|---|---|---|---|---|---|
| | | | | ಸಿದ್ದಪ್ಪ 34 ವರ್ಷ, ಒಕ್ಕಲಿಗರು, ವ್ಯವಸಾಯ, ನಾರಾಯಣಗೌಡ ಬೀದಿ ಕ್ಯಾತನಹಳ್ಳಿ ಗ್ರಾಮ.<br>6) ಪುಟ್ಟಚಲುವೇಗೌಡ ಬಿನ್ ಬೆಟ್ಟೇಗೌಡ, 40 ವರ್ಷ, ಚಿನಕುರುಳಿ ಗ್ರಾಮ, ಪಾಂಡವಪುರ ತಾಲ್ಲೂಕು<br>7) ಕುಮಾರ್ ಬಿನ್ ಸಿದ್ದೇಗೌಡ, 39 ವಷ್, ಅಗಟಹಳ್ಳಿ ಗ್ರಾಮ ಪಾಂಡವಪುರ ತಾಲ್ಲೂಕು<br>8) ಎಸ್. ಸೋಮಶೇಖರ ಬಿನ್ ಸಿಂಗ್ರಿಗೌಡ, 53 ವರ್ಷ, ಎಲೆಕೆರೆ ಗ್ರಾಮ, ಪಾಂಡವಪುರ ತಾಲ್ಲೂಕು<br>9) ಬಲ್ಲೇನಹಳ್ಳಿ ಶಿವಣ್ಣ ಬಿನ್ ಕಪರಯ್ಯ, ಬೆಳಗೊಳ ಸರ್ಕಲ್, ಬೆಳಗೊಳ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>10) ಕೃಷ್ಣ ಬಿನ್ ಹೊನ್ನಪ್ಪ, | ಕಾವೇರಿ ಹಿತ ರಕ್ಷಣಾ ಸಮಿತಿ ಅಧ್ಯಕ್ಷರಾದ ಶ್ರೀ ಜಿ. ಮಾದೇಗೌಡರ ನೇತೃತ್ವದಲ್ಲಿ ಮುತ್ತಿಗೆ ಕಾರ್ಯಕ್ರಮದ ಬಂದೋಬಸ್ತ್ ಕರ್ತವ್ಯದಲ್ಲಿ ಕರ್ತವ್ಯದಲ್ಲಿದ್ದಾಗ ಆರೋಪಿಗಳಾದ ಚಿದಂಬರ್, ಸತ್ಯಾನಂದ, ಗಣಿಗ ರವಿಕುಮಾರ್, ಅಶೋಕ ಜಯರಾಮ್ ಹಾಗೂ ನೂರಾರು ರಕ್ಷಣಾವೇದಿಕೆಯ ಕಾರ್ಯಕರ್ತರುಗಳು ಕಲ್ಲುಗಳನ್ನು ತೋರಿದಾಗ ಕಲ್ಲು ಪಿರ್ಯಾದಿಯ ಬಲ ಹಣೆಯ ಮೇಲೆ ಬಿದ್ದು ರಕ್ತ ಗಾಯವಾಗಿರುತ್ತದೆ ಇತ್ಯಾದಿ | |

| | | | | | | |
|---|---|---|---|---|---|---|
| | | | | ಗರಡಿಬೀದಿ ಬೆಳಗೊಳ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>11) ಟ್ರಾಕ್ಟರ್ ಕುಮಾರ್ ಬಿನ್ ಹೊನ್ನೇಗೌಡ, ರಾಮಮಂದಿರ ಹಿಂಭಾಗ, ಬೆಳಗೊಳ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>12) ಮೋಹನ್ ಕುಮಾರ್ ಬಿನ್ ಬೊನಾಸಿ ರಾಮಣ್ಣ, ರಾಮಮಂದಿರ ಹಿಂಭಾಗ, ಬೆಳಗೊಳ ಶ್ರೀರಂಗಪಟ್ಟಣ ತಾಲ್ಲೂಕು,<br>13) ಮೀಸೆ ಶಿವಣ್ಣ ಬಿನ್ ಜವರೇಗೌಡ, ಬಲಮುರಿ ರಸ್ತೆ ಬೆಳಗೊಳ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>14) ದಿನೇಶ ಬಿನ್ ಬೊಚ್ಚೇಗೌಡ, ಮುಜ್ಜಿಗೆಪುರ ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕು<br>15) ಜಗದೀಶ್ ಬಿನ್ | | |

| | | | | | | |
|---|---|---|---|---|---|---|
| | | | | ರಾಮೇಗೌಡ 32, ವರ್ಷ, ಒಕ್ಕಲಿಗರು ಚಿನಕುರಳಿ ಗ್ರಾಮ, ಪಾಂಡವಪುರ ತಾಲ್ಲೂಕು<br>16) ದೇವರಾಜು ಬಿನ್ ಮರಿದೇವಯ್ಯ 50 ವರ್ಷ ಪ.ಜಾ. ಡಿ.ಎಸ್.ಎಸ್. ಅರಳಕುಪ್ಪೆ ಗ್ರಾಮ ಪಾಂಡವಪುರ ತಾಲ್ಲೂಕು<br>17) ಕುಮಾರ ಬಿನ್ ದೇವೇಗೌಡ 24 ವರ್ಷ ವಕ್ಕಲಿಗರು ಬೇವಿನಕುಪ್ಪೆ ಗ್ರಾಮ ಪಾಂಡವಪುರ ತಾಲ್ಲೂಕು<br>18) ಹೆಚ್. ಡಿ. ಜಯರಾಂ ಬಿನ್ ಡಿ.ಎಂ. ದೇವಯ್ಯ ಸುಮಾರು 52 ವರ್ಷ, ಕರವೇ ಪ್ರವೀಣಶೆಟ್ಟಿ ಬಣ, ಬೂತನಹೊಸರೂ, ಮಂಡ್ಯ ಜಿಲ್ಲೆ.<br>19) ಕೆ. ಟಿ. ಹನುಮೇಶ್ ಬಿನ್ ತಿಮ್ಮೇಗೌಡ ಒಕ್ಕಲಿಗರು, ವ್ಯಾಪಾರ, ಮಂಡ್ಯ ತಾಲ್ಲೂಕು | | |

| | | | | | | |
|---|---|---|---|---|---|---|
| | | | | ಕನ್ನಡಸೇನೆ ಯುವ ಅಧ್ಯಕ್ಷರು, ಕಿರಗಂದೂರು<br>20) ಸುಜಿತ್‌ಕುಮಾರ್ ಬಿನ್ ತಿಮ್ಮೇಗೌಡ 33 ವರ್ಷ, ಕರ್ನಾಟಕ ಕನ್ನಡ ಸೇನೆ ಮಂಡ್ಯ ನಗರ ಉಪಾಧ್ಯಕ್ಷರು ಮತ್ತು ವ್ಯಾಪಾರ, ಕುವೆಂಪುನಗರ ಮಂಡ್ಯ ನಗರ. | | |
| 15 | ಕೆ.ಆರ್.ಸಾಗರ ಪೊಲೀಸ್ ಠಾಣೆ | ಮೊ.ನಂ. 160/2012 ಕಲಂ 143, 341, 427 ಕೂಡ 149 ಐ.ಪಿ.ಸಿ. ಹಾಗೂ ಕಲಂ 2(ಎ) & (ಬಿ) ಕರ್ನಾಟಕ ಪ್ರಿವೆನ್ಸನ್ ಆಫ್ ಡಿಸ್ಟ್ರಕ್ಷನ್ & ಲಾಸ್ ಆಫ್ ಪ್ರಾಪರ್ಟಿ ಆಕ್ಟ್ | ಬಾನಪ್ಪ ನೇಮತಿ ಬಿನ್ ಬಸವಲಿಂಗಪ್ಪ ಚಾಲಕ ನಂ. 10166 ಸಾತಗಳ್ಳಿ ಘಟಕ ಮೈಸೂರು ನಗರ ಸಾರಿಗೆ ವಿಭಾಗ ಕೆ.ಎಸ್.ಆರ್.ಟಿ.ಸಿ. ಮೊಬೈಲ್ ನಂ. 8495809439 | 1) ಸಾಗರ 2) ಸೋಮ 3) ಸಂದೇಶಗೌಡ 4) ಅಭಿ 5) ಮನು 6) ಪ್ರದೀಪ್ 7) ಕೃಷ್ಣ, 8) ಪ್ರತಾಪ್ 9) ಅರುಣ ಮತ್ತು 10) ಬಸವರಾಜು ಎಲ್ಲರೂ ಹೊಸ ಅನಂದೂರು | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾವೇರಿ ನದಿ ನೀರಿನ ವಿಚಾರದಲ್ಲಿ ದೆಹಲಿಯಲ್ಲಿ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ನದಿ ಪ್ರಾದಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕದಿಂದ ತಮಿಳುನಾಡಿಗೆ ದಿನಾಂಕ: 15.10.2012 ರವರೆಗೆ ಪ್ರತಿ ದಿನ 9 ಸಾವಿರ ಕ್ಯೂಸೆಕ್ಸ್ ನೀರನ್ನು ಹರಿಸಬೇಕೆಂದು | ಸಿಸಿ.ನಂ: 118/13 ರಲ್ಲಿ ದಿನಾಂಕ: 07.07.14 ರಿಂದ ವಿಚಾರಣೆಯಲ್ಲಿದೆ |

| | | | | | | |
|---|---|---|---|---|---|---|
| | | | | | ಆದೇಶ ಮಾಡಿರುವುದನ್ನು ವಿರೋಧಿಸಿ ಮಂಡ್ಯ ಜಿಲ್ಲೆಯಾದ್ಯಂತ ಕಾವೇರಿ ಹಿತ ರಕ್ಷಣಾ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ರಾಜಕೀಯ ಪಕ್ಷಗಳು ಹಾಗೂ ಅನೇಕ ಸಂಘಟನೆಗಳು ಹಮ್ಮಿಕೊಂಡಿರುವ ಪ್ರತಿಭಟನೆಯ ಸಂಬಂಧ ದಿನಾಂಕ: 07.10.12 ರಂದು ಬೆಳಿಲಗ್ಗೆ 11–30 ಗಂಟೆಯಲ್ಲಿ ಕಾವೇರಿ ನೀರಿನ ವಿಚಾರದಲ್ಲಿ ಆರೋಪಿಗಳಾದ 1) ಸಾಗರ 2) ಸೋಮ 3) ಸಂದೇಶಗೌಡ 4) ಅಭಿ 5) ಮನು 6) ಪ್ರದೀಪ್ 7) ಕೃಷ್ಣ, 8) ಪ್ರತಾಪ್ 9) ಅರುಣ ಮತ್ತು 10) ಬಸವರಾಜು ಎಲ್ಲರೂ ಹೊಸ ಅನಂದೂರು ರವರುಗಳು ಪಂಪ ಹೌಸ್ | |

| | | | | | | |
|---|---|---|---|---|---|---|
| | | | | | ಹತ್ತಿರ ರಸ್ತೆ ತಡೆ ನಡೆಸುತ್ತಿದ್ದು, ವಾಹನವನ್ನು ತಡೆದು ಕೆ. ಎ. 09 ಎಫ್ 4489 ರ ಬಾಹನದ ಮುಂಬಾಗ, ಹಿಂಭಾಗ ಮತ್ತು ಬಲ ಭಾಗದ 3 ಸೈಡ್‌ಗ್ಲಾಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದ್ದರಿಂದ ಒಡೆದು ಹೋಗಿ ಸುಮಾರು 20 ರಿಂದ 25 ಸಾವಿರ ರೂ.ಗಳ ನಷ್ಟ ಉಂಟು ಮಾಡಿರುತ್ತಾರೆ. | |
| 16 | ಕೆ. ಆರ್. ಸಾಗರ ಪೊಲೀಸ್ ಠಾಣೆ | ಮೊ. ನಂ. 190/2012 ಕಲಂ: 143, 188, 427, 353 ಕೂಡ 149 ಐಪಿಸಿ ಹಾಗೂ ಕಲಂ 2(ಎ) & (ಬಿ) ಕರ್ನಾಟಕ ಪ್ರಿವೆನ್ಸನ್ ಆಫ್ ಡಿಸ್ಟ್ರಕ್ಷನ್ & ಲಾಸ್ | ಪಿ. ಎಂ. ಹರೀಶ್ ಕುಮಾರ್, ಪಿ.ಎಸ್.ಐ. ಕೆ.ಆರ್. ಸಾಗರ ಪೊಲೀಸ್ ಠಾಣೆ | 1) ಕೆಂಪೇಗೌಡ ಬಿನ್ ಪುಟ್ಟಬೊರೇಗೌಡ, ಸುಮಾರು 57 ವರ್ಷ, ಒಕ್ಕಲಿಗರು, ಶ್ರೀರಂಗಪಟ್ಟಣ ತಾಲ್ಲೂಕು ರೈತ ಸಂಘದ ಅಧ್ಯಕ್ಷ, ಅಚ್ಚಪ್ಪನಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು 2) ಕೆ.ಎಸ್.ನಂಜುಂಡೇಗೌಡ ಬಿನ್ ಸಣ್ಣೇಗೌಡ, ಸುಮಾರು | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕದಿಂದ ತಮಿಳುನಾಡಿಗೆ ಪ್ರತಿ ದಿನ 10 ಸಾವಿರ ಕ್ಯೂಸೆಕ್ಸ್ ನೀರನ್ನು ಹರಿಸಬೇಕೆಂದು ಆದೇಶ ಮಾಡಿರುವುದನ್ನು ವಿರೋಧಿಸಿ ಮಂಡ್ಯ ಜಿಲ್ಲೆ | ಸಿ.ಸ. ನಂ. 106/13 ರಲ್ಲಿ ದಿನಾಂಕ: 07.07.2014 ರಂದು ವಿಚಾರಣೆಯಲ್ಲಿದೆ |

| | | | | | | |
|---|---|---|---|---|---|---|
| | | ಆಫ್ ಪ್ರಾಪರ್ಟಿ ಆಕ್ಟ್ | | 57 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘದ ಮುಖಂಡರು, ಕಡತನಾಳು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು.<br>3) ಚಾಮರಜ ಬಿನ್ ಸಣ್ಣಮೂಗೇಗೌಡ, ಸುಮಾರು 50 ವರ್ಷ, ಒಕ್ಕಲಿಗರು, ಕಡತನಾಳು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>4) ತಮ್ಮಣ್ಣಗೌಡ ಬಿನ್ ತಿಪ್ಪೇಗೌಡ, ಸುಮಾರು 37 ವರ್ಷ, ಒಕ್ಕಲಿಗರು, ಕರಾರೈಸಂಘ, ಕೂಡಲಕುಪ್ಪೆ ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕು.<br>5) ಬಿ. ಸಿ. ಪ್ರವೀಣ ಬಿನ್ ಎನ್. ಚಲುವರಾಜು, ಸುಮಾರು 28 ವರ್ಷ, ಒಕ್ಕಲಿಗರು, ಕರಾರೈ ಸಂಘ, ಬಲ್ಲೇನಹಳ್ಳಿ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು | ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರುಗಳಾದ 1) ಕೆ.ಎಸ್.ನಂಜುಂಡೇಗೌಡ 2) ಪಿ. ಬಾಲಕೃಷ್ಣ 3) ಕೆಂಪೇಗೌಡ 4) ಚಾಮರಾಜು 5) ತಮ್ಮಣ್ಣಗೌಡ 6) ಪ್ರವೀಣ್ 7) ನದೀಂ ಪಾಷ 8) ಕೃಷ್ಣೇಗೌಡ, 9) ಶ್ರೀಕಂಥ 10) ತಮ್ಮೇಗೌಡ 11) ಪಿ. ರಮೇಶ್, 12) ವಿಠಲ್ 13) ನಾಗೇಂದ್ರಸ್ವಾಮಿ 14) ಬಿ.ಸಿ. ಕೃಷ್ಣೇಗೌಡ 15) ಕೆಂಪಿ ಧನಂಜಯ್ಯ ಎಲ್ಲರೂ ಕಲಂ: 144 ಸಿಆರ್‌ಪಿಸಿ ಪ್ರತಿಕಾಜ್ಞೆಯನ್ನು ಉಲ್ಲಂಘಿಸಿ ಬೃಂದಾವನ ಗಾರ್ಡನ್ ಒಳಗೆ ಪ್ರವೇಶ ಮಾಡಿ ಬ್ಯಾರಿಕೇಡ್‌ನ್ನು ಜಕ್ಕಂ ಮಾಡಿ ಮುಳ್ಳು ತಂತಿ ಬೇಲಿಯನ್ನು ಕಿತ್ತು | |

| | | | | | | |
|---|---|---|---|---|---|---|
| | | | | 6) ನದೀಮ್ ಪಾಷ್ ಬಿನ್ ಮಹಮದ್ ಗೌಸ್, 47 ವರ್ಷ, ಕ.ರಾ.ರೈ. ಸಂಘ ಅಚ್ಚಪ್ಪನಕೊಪ್ಪಲು, ಶ್ರೀರಂಗಪಟ್ಟಣ ತಾಲ್ಲೂಕು<br>7) ಕೃಷ್ಣೇಗೌಡ ಬಿನ್ ಕಾಳೇಗೌಡ, 40 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘ, ಅಚ್ಚಪ್ಪನಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>8) ಕೆ. ವಿ. ಶ್ರೀಕಂಠ ಬಿನ್ ಸಿ. ಪುಟ್ಟಸ್ವಾಮಿ, ಸುಮಾರು 37 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘ, ಕಡತನಾಳು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>9) ತಮ್ಮೇಗೌಡ ಬಿನ್ ಕೃಷ್ಣಪ್ಪ, 54 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘ, ಕೂಡಲಕುಪ್ಪೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>10) ಪಿ.ರಮೇಶ್ ಬಿನ್ ಪ್ರಕಾಶ, ಸುಮಾರು 42 | ಹಾಕಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ನಷ್ಟ ಉಂಟು ಮಾಡಿರುತ್ತಾರೆ. | |

| | | | | | | |
|---|---|---|---|---|---|---|
| | | | | ವರ್ಷ, ಒಕ್ಕಲಿಗರು, ಕರಾರೈ ಸಂಘ, ಅಚ್ಚಪ್ಪನಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>11) ಎನ್. ವಿಠಲ್ ಬಿನ್ ನಿಂಗೇಗೌಡ, 38 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘ, ಅಚ್ಚಪ್ಪನಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>12) ಕೆ. ನಾಗೇಂದ್ರ ಸ್ವಾಮಿ ಬಿನ್ ಪುಟ್ಟಸ್ವಾಮಯ್ಯ, ಸುಮಾರು 54 ವರ್ಷ, ಒಕ್ಕಲಿಗರು, ಕ.ರಾ.ರೈ.ಸಂಘ, ಕೂಡಲಕುಪ್ಪೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು<br>13) ಬಿ. ಸಿ. ಕೃಷ್ಣೇಗೌಡ ಬಿನ್ ಚಲುವೇಗೌಡ, ಸುಮಾರು 42 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘ, ಬಲ್ಲೇನಹಳ್ಳಿ, ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕು<br>14) ಕೆ. ಪಿ. ಧನಂಜಯ ಬಿನ್ ಪಾಪೇಗೌಡ ಸುಮಾರು | | |

| | | | | | | |
|---|---|---|---|---|---|---|
| | | | | 33 ವರ್ಷ, ಒಕ್ಕಲಿಗರು, ಕ.ರಾ.ರೈ. ಸಂಘ, ಕಡತನಾಳು, ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕು<br>15) ಡಿ. ಬಾಲಕೃಷ್ಣ ಬಿನ್ ಪುಟ್ಟೇಗೌಡ, ಸುಮಾರು 52 ವರ್ಷ, ಒಕ್ಕಲಿಗರು, ವ್ಯವಸಾಯ, ಕ.ರಾ.ರೈ. ಸಂಘ ಕಡತನಾಳು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು | | |
| 17 | ಹಲಗೂರು | 212/12 ಕಲಂ 143, 341, 188 ರೆ/ವಿ 149 ಐಪಿಸಿ | ಶ್ರೀ ಗಂಗಾಧರ ಎಸ್ ಪಿಎಸ್ಐ ಹಲಗೂರು ಪಿಎಸ್ | 1) ಮಧುಜಿ ಮಾದೇಗಾಡ ಎಂ.ಎಲ್.ಸಿ. ಮಂಡ್ಯ<br>2) ಡಾ॥ ಕೆ. ಅನ್ನದಾನಿ ಮಾಜಿ ಶಾಸಕರು<br>3) ಕು॥ ಮಲ್ಲಾಜಮ್ಮ ಮಾಜಿ ಶಾಸಕರು<br>4) ರಾಜೀವ್ ಅಣ್ಣೂರು<br>5) ಮಹೇಶ್ ಬಿನ್ ಮಾದೇಗೌಡ ಡಿ. ಹಲಸಹಳ್ಳಿ | ದಿನಾಂಕ: 02.10.12 ರಂದು ಕಾವೇರಿ ನೀರಿನ ಹಂಚಿಕೆ ವಿಚಾರದ ಬಗ್ಗೆ ತೊರೆಕಾಡನಹಳ್ಳಿ ಬೆಂಗಳೂರು ನೀರು ಸರಬರಾಜು ವಿಚಾರದಲ್ಲಿ ಕಾವೇರಿ ನೀರಿನ ಗಲಾಟೆ ಸಂಬಂಧ ಬಂದೋಬಸ್ತ್ ಕರ್ತವ್ಯದಲ್ಲಿದ್ದಾಗ ಟಿ. ಕೆ. ಹಳ್ಳಿ ಸುತ್ತ ಮುತ್ತ 144 ಸೆಕ್ಷನ್ ಜಾರಿ ಇದ್ದರು ಸಹ ಅಕ್ರಮ ಗುಂಪು | ಸಿಸಿ ನಂಬರ್ 156/14 ರಲ್ಲಿ ವಿಚಾರಣೆಯಲ್ಲಿರುತ್ತದೆ ವಿಚಾರಣಾ ದಿನಾಂಕ: 15.09.14 |

| | | | | | | |
|---|---|---|---|---|---|---|
| | | | | | ಕಟ್ಟಿಕೊಂಡು ಬೆಂಗಳೂರು ನೀರು ಸರಬರಾಜು ಮಂಡಳಿಯ ಮುಂಭಾಗ ಕನಕಪುರ ಮಳವಳ್ಳಿ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ಮಾಡಿ ನಿಷೇದಾಜ್ಞೆಯನ್ನು ಉಲ್ಲಂಘಿಸಿ ರಸ್ತೆಯಲ್ಲಿ ಬರುತ್ತಿದ್ದ ವಾಹನಗಳನ್ನು ಅಡ್ಡಗಟ್ಟಿ ಸಂಚಾರಕ್ಕೆ ಅಡ್ಡಿಪಡಿಸಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿರುವುದಾಗಿ ನೀಡಿದ ಪಿರ್ಯಾದು. | |
| 18 | ಮದ್ದೂರು | 417/12 ಕಲಂ 143– 341– 353– ರೆ/ವಿ 149– ಐಪಿಸಿ | ಬಿ. ಎಸ್. ಶ್ರೀಧರ್ ಪಿ.ಎಸ್.ಐ. ಮದ್ದೂರು ಪೊಲೀಸ್ ಠಾಣೆ | 1) ಚಂದ್ರಶೇಖರ್ ಬಿನ್ ಲೇಟ್ ಎನ್ ಈರಯ್ಯ, ಗೆಜ್ಜಲಗೆರೆ ಮದ್ದೂರು ತಾ: 2) ಶ್ರೀಮತಿ ಸುನಂದ ಕೋಂ. ಜಯರಾಮ್, ಗೆಜ್ಜಲಗೆರೆ ಮದ್ದೂರು ತಾ: 3) ಜೆ. ಬಿ. ಶಂಕರ್ ಬಿನ್ | ದಿನಾಂಕ: 30.09.12 ರಂದು ಬೆಳಿಗ್ಗೆ 6–00 ರಿಂದ ಸಂಜೆ 5–00 ಗಂಟೆಯವರೆಗೆ ಆರೋಪಿತರು ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿರುವುದನ್ನು ಪ್ರತಿಭಟಿಸಿ | ಪಿ.ಟಿ. ಸಿಸಿ 804/14 ರಲ್ಲಿ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ |

| | | | | | | |
|---|---|---|---|---|---|---|
| | | | | ಬೋರೇಗೌಡ ಗೆಜ್ಜಲಗೆರೆ ಮದ್ದೂರು ತಾ:<br>4) ಸಿದ್ದೇಗೌಡ ಬಿನ್ ಲೇಟ್ ಮಾದೇಗೌಡ, ಸಾದೊಳಲು ಗ್ರಾಮ, ಮದ್ದೂರು ತಾ:<br>5) ಜಿ. ಸಿ. ಸುನೀಲ್ ಕುಮಾರ್ ಬಿನ್ ಚಿಕ್ಕಲಿಂಗೇಗೌಡ ಗೆಜ್ಜಲಗೆರೆ ಮದ್ದೂರು ತಾ:<br>6) ಜಿ. ಸಿ. ನಾಗರಾಜು ಬಿನ್ ಚಿಕ್ಕಮೋಗೆಗೌಡ ಗೆಜ್ಜಲಗೆರೆ ಮದ್ದೂರು ತಾ:<br>7) ವಿಶ್ವನಾಥ್ ಬಿನ್ ಲೇಟ್ ಸಿದ್ದಯ್ಯ ಸೊಳ್ಳೆಪುರ ಮದ್ದೂರು ತಾ:<br>8) ರವಿಕುಮಾರ್ ಬಿನ್ ಚಿಕ್ಕೈದೇಗೌಡ ಸಾದೊಳಲು ಮದ್ದೂರು ತಾ:<br>9) ಶ್ರೀಕಂಠ ಬಿನ್ ದೊಡ್ಡದ್ಯೆಗೌಡ ಗೆಜ್ಜಲಗೆರೆ ಮದ್ದೂರು ತಾ: | ರಸ್ತೆ ತಡೆ ಮಾಡಿರುತ್ತಾರೆ. | |

| | | | | | | |
|---|---|---|---|---|---|---|
